# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
80,000
HAMPI TIMES E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ: 34 Issue: 34 • ಆರ್.ಎನ್.ಐ. ನಂ.:KARKAN/2023/88055 RNI No:KARKAN/2023/88055 • ವಿಜಯನಗರ VIJAYANAGARA • 30.07.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2


# ಗಿಡಮರಗಳ ರುಂಡ ಚೆಂಡಾಡಿದ ಜೆಸ್ಕಾಂ

## ಪರಿಸರ ಪ್ರೇಮಿಗಳಿಂದ ಆಕ್ರೋಶ | ಕಣ್ಣಿಗೆ ಕಂಡರೂ ಕಾಣದಂತಿರುವ ಅಧಿಕಾರಿ ವರ್ಗ

## ಗಿಡಮರಗಳಿಗೆ ಜೆಸಿಬಿಯಿಂದ ಗದಪ್ರಹಾರ | ಭಾಷಣಕ್ಕೆ ಸೀಮಿತವಾಯ್ತಾ ಪರಿಸರ ಕಾಳಜಿ?

## ತಂತಿಗಳ ಬದಲಿಗೆ ಕೇಬಲ್ ಹಾಕಲು ಒತ್ತಾಯ | ಸಂವಹನ ಕೊರತೆಯಿಂದ ಗಿಡಗಳ ನಾಶ

■ **ಹಂಪಿ ಟೈಮ್ಸ್ ಹೊಸಪೇಟೆ**

ಸಕಲ ಜೀವರಾಶಿಗಳ ಉತ್ತಮ ಆರೋಗ್ಯ ಅಡಗಿರುವುದೆ ಗಿಡಮರಗಳ ಬೀಸುವ ಗಾಳಿಯಲ್ಲಿ ಎಂಬುದನ್ನ ಅರಿತ ಪರಿಸರ ಪ್ರೇಮಿಗಳು, ಅರಣ್ಯ ಇಲಾಖೆ ಸಿಬ್ಬಂದಿ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಮಳೆಗಾಲದಲ್ಲಿ ಗಿಡ ನೆಟ್ಟು ಸಂರಕ್ಷಿಸಲು ಜಾಗೃತಿ ಮೂಡಿಸುತ್ತಾ ಬರುತ್ತಿದ್ದಾರೆ. ವಿಶ್ವ ಪರಿಸರ ದಿನಾಚರಣೆಯಂಗವಾಗಿ ನಾನಾ ಸಂಘ ಸಂಸ್ಥೆಗಳು, ಅಧಿಕಾರಿಗಳು ಮಕ್ಕಳೊಂದಿಗೆ ಗಿಡ ನೆಟ್ಟು ಜಾಗೃತಿ ಭಾಷಣಗಳನ್ನು ಮಾಡುತ್ತಾರೆ. ಗ್ಲೋಬಲ್ ವಾರ್ಮಿಂಗ್‌ನಿಂದ ಪಾರಾಗಲು ವಿದ್ಯಾರ್ಥಿಗಳು ತಮ್ಮ ಹುಟ್ಟುಹಬ್ಬಕ್ಕೊಂದು ಗಿಡ ನೆಡಿ ಎಂಬ ಜಾಗೃತಿ ಮೂಡಿಸಲಾಗುತ್ತಿದೆ. ಆದರೆ ಜೆಸ್ಕಾಂ ಸಿಬ್ಬಂದಿ ಗಿಡಮರಗಳ ರುಂಡ ಚೆಂಡಾಡುತ್ತಿದ್ದರೂ, ನಮ್ಮನ್ನು ರಕ್ಷಿಸುವವರಿಲ್ಲವಲ್ಲ ಎಂದು ಗಿಡಮರಗಳು ರೋಧಿಸುತ್ತಿರುವುದು ಅಧಿಕಾರಿಗಳ ಕಣ್ಣಿಗೆ ಬೀಳದಿರುವುದು ವಿಪರ್ಯಾಸವೆ ಸರಿ.





ಹೌದು. ನಗರದಲ್ಲಿ ಇತ್ತೀಚೆಗೆ ಆಷಾಡ ಗಾಳಿ ಹೆಚ್ಚಾಗಿದ್ದರಿಂದ ವಿದ್ಯುತ್ ತಂತಿಗಳಿಗೆ ತಗುಲುವ ಮರದ ಟೊಂಗೆಗಳನ್ನು ಮಾತ್ರ ಕತ್ತರಿಸಲು ಜೆಸ್ಕಾಂ ಸಿಬ್ಬಂದಿಗೆ ಮೇಲಾಧಿಕಾರಿಗಳು ಸೂಚಿಸಿದ್ದಾರೆ. ಆದರೆ ಟೊಂಗೆಗಳ ಬದಲಿಗೆ ಜೆಸಿಬಿ ಬಳಸಿ ಸಾಲು ಸಾಲು ಗಿಡಮರಗಳ ರುಂಡವನ್ನು ಚೆಂಡಾಡುತ್ತಿದ್ದಾರೆ. ಇದನ್ನು ಕಂಡ ಪರಿಸರ ಪ್ರೇಮಿಗಳು ಯಾರಿಗೆ ದೂರಬೇಕು ಎಂಬುದು ತಿಳಿಯದಂತಾಗಿ, ಜೆಸ್ಕಾಂ ಕಾರ್ಯಕ್ಕೆ ಹಿಡಿಶಾಪ ಹಾಕುತ್ತಾ ಮುನ್ನಡೆಯುತ್ತಿರುವುದು ಸಾಮಾನ್ಯವಾಗಿದೆ. ಒಂದು ಗಿಡ ಮರವಾಗಬೇಕಾದರೆ ಹತ್ತಾರು ವರ್ಷಬೇಕಾಗುತ್ತದೆ. ಬೆಳೆದು ನಿಂತ ಗಿಡಮರಗಳಿಂದ ಸಿಗುವ ಆಮ್ಲಜನಕವನ್ನು ಉಚಿತವಾಗಿ ಪಡೆದು ಆರೋಗ್ಯವಾಗಿದ್ದೇವೆ. ಅಡವಿಯಲ್ಲಿ ಮರಗಳನ್ನು ಕಡಿದರೆ ಮಾತ್ರ ಗಿಡಗಳ ಮಾರಣ ಹೋಮವೇ? ನಗರದಲ್ಲಿ ಹಚ್ಚಹಸಿರಿನಿಂದ ಕೂಡಿದ್ದ ಗಿಡಮರಗಳು ಈಗ ಎಲೆ ಹೂವಿಲ್ಲದಂತಾಗಿ ದೃಷ್ಟಿಬೊಂಬೆಯಂತೆ ನಿಂತಿರುವುದನ್ನು ನೋಡಿದ ಮಾನವೀಯ ಮನಸ್ಸುಗಳು ಮಮ್ಮಲ ಮರುಗುತ್ತಿವೆ.

ಗಿಡಮರಗಳನ್ನು ಹೀಗೆ ನಗರದಾದ್ಯಂತೆ ಕಡಿಯುತ್ತಾ ಹೋದರೆ ನಗರ ಹಸಿರಿಲ್ಲದಂತಾಗಿ ನಗರದ ಸೌಂದರ್ಯವೇ ಹಾಳಾಗಲಿದೆ. ಮರುಗಳು ಕಾರ್ಬನ್ ಡೈಆಕ್ಸೈಡ್ ಪಡೆದು, ಜೀವರಾಶಿಗಳಿಗೆ ಅಮ್ಲಜನಕ ಬಿಡುಗಡೆ ಮಾಡುತ್ತದೆ. ಮರ ಕಡಿಯುವುದರಿಂದ ಹವಾಮಾನ ಬದಲಾವಣೆಯಾಗಿ ಮತ್ತಷ್ಟು ಗ್ಲೋಬಲ್ ವಾರ್ಮಿಂಗ್‌ಗೆ ಕಾರಣವಾಗಬಹುದಾಗಿದೆ. ಮರಗಳನ್ನು ಅರ್ಧಭಾಗವನ್ನೆ ಕಡಿಯುವುದರಿಂದ ಮಣ್ಣಿನ ಮೇಲಿನ ಹಿಡಿತ ಮರಗಳಿಗೆ ಕಡಿಮೆಯಾಗುತ್ತದೆ. ಅಲ್ಲದೆ ಮರ ನೀರಿದಿಡುಟ್ಟಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಳ್ಳಲಿದೆ. ಮರಗಳಿದ್ದರೆ ಮಾತ್ರ ಮಳೆಗಾಲದ ನೀರನ್ನು ತಕ್ಕಮಟ್ಟಿಗೆ ಹಿಡಿದಿಟ್ಟುಕೊಳ್ಳುತ್ತವೆ. ಮರಗಳ ಕತ್ತರಿಸುತ್ತಾ ಹೋದರೆ ಬರ ಬಂದೆರಗುತ್ತದೆ. ಗಿಡಮರಗಳನ್ನು ಬೋಳಾಗಿಸಿದರೆ ಗಿಡಮರಗಳನ್ನೆ ಅವಲಂಬಿಸಿದ ಪ್ರಾಣಿ, ಪಕ್ಷಿಗಳು ವಾಸಸ್ಥಾನಗಳನ್ನು ನಾಶಗೊಳಿಸಿದಂತಾಗುತ್ತದೆ. ಮರಗಳಿಂದ ಅನಾಹುತ ಎದುರಾಗಬಹುದು ಎನ್ನುವ ಜೆಸ್ಕಾಂ ಸಿಬ್ಬಂದಿಗೆ ಪರಿಸರದ ಕುರಿತು ಅರಿವಿನ ಅಗತ್ಯವಿದೆ. ನಗರದ ನಾನಾ ಕಡೆ ವಿದ್ಯುತ್ ತಂತಿಗಳ ಬದಲಿಗೆ ಎಬಿಸಿ ಕೇಬಲ್ ಹಾಕಲಾಗಿದೆ. ಅದರಂತೆ ಗುಣಮಟ್ಟದ, ಬಳಕೆಯ ಸಾಮರ್ಥ್ಯಕ್ಕೆ ತಕ್ಕದಾದ ವಿದ್ಯುತ್ ತಂತಿಯ ಬದಲಿಗೆ ಕೇಬಲ್ ಹಾಕಿದರೆ ಪರಿಸರವನ್ನು ಸಂರಕ್ಷಿಸಿದಂತಾಗುತ್ತದೆ. ಆಷಾಡ ಗಾಳಿಯಿಂದಾಗುವ ವಿದ್ಯುತ್ ಅವಘಡಗಳಿಂದತೂ ತಪ್ಪಿಸಿಕೊಂಡಾಗುತ್ತದೆ. ಜೆಸ್ಕಾಂ ಅಧಿಕಾರಿಗಳು, ಅರಣ್ಯಾಧಿಕಾರಿಗಳು, ನಗರಸಭೆ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು ಪರಿಸರ ರಕ್ಷಣೆಗೆ ಆದ್ಯತೆ ನೀಡಬೇಕೆನ್ನುವುದು ಪರಿಸರ ಪ್ರೇಮಿಗಳ ಒತ್ತಾಯವಾಗಿದೆ.

> ಗಿಡಮರಗಳಿಗೆ ತೀವ್ರ ಹಾನಿಯಾಗದಂತೆ ಜೆಸ್ಕಾಂ ಸಿಬ್ಬಂದಿ ಟೊಂಗೆಗಳನ್ನು ಕತ್ತಿರಿಸಲು ಅವಕಾಶ ವಿದೆ. ಆದರೆ ಗಿಡಗಳನ್ನು ಕತ್ತರಿಸಬಾರದು. ಗಿಡಮರಗಳಿದ್ದರೆ ಮಳೆ, ಮಳೆ ಬಂದರೆ ಸಕಲ ಜೀವರಾಶಿ ಗಳಿಗೂ ಅನ್ನ ಆಹಾರ ಎಂಬುದನ್ನು ಯಾರೂ ಮರೆಯಬಾರದು. ನಿಯಮ ಮೀರಿ ಮರಗಳನ್ನು ಕಡಿಯಬಾರದು.
>
> – **ಭರತ್‌ರಾಜ್** ವಲಯ ಅರಣ್ಯಾಧಿಕಾರಿ, ಹೊಸಪೇಟೆ.

> ಆಷಾಡದಲ್ಲಿ ಗಾಳಿ ಹೆಚ್ಚು, ಎಲ್ಲಿ ವಿದ್ಯುತ್ ತಂತಿಗಳಿಗೆ ಗಿಡಗಳ ಟೊಂಗೆಗಳು ತಗುಲುತ್ತಾವೋ ಅಲ್ಲಿ ಮಾತ್ರ ಒಂದು ಮೀಟರ್‌ನಷ್ಟು ಮಾತ್ರ ಕೆಳಗೆ ಟೊಂಗೆ ಕತ್ತರಿಸಬೇಕು. ಹೆಚ್ಚು ಕತ್ತರಿಸಬಾರದು. ಇನ್ನೂ ಮೂರು ತಿಂಗಳು ವಿದ್ಯುತ್ ತಂತಿಗಳಿಗೆ ತಗುಲವ ಟೊಂಡೆಗಳ ಕತ್ತರಿಸುವಿಕೆ ನಡೆಯುತ್ತದೆ. ಎಲ್ಲಿಯಾದರೂ ಗಿಡಗಳನ್ನು ನಿಯಮಮೀರಿ ಕತ್ತರಿಸಿದ್ದರೆ ಕ್ರಮಕೈಗೊಂಡು ಎಚ್ಚರಿಕೆ ನೀಡಲಾಗುವುದು.
>
> – **ತೇಜಾನಾಯ್ಕ**
> ಇ.ಇ. ಜೆಸ್ಕಾಂ, ಹೊಸಪೇಟೆ

> ವಿದ್ಯುತ್ ತಂತಿಗೆ ತಗಲುವ ಗಿಡಗಳ ಟೊಂಗೆಗಳ ಕತ್ತರಿಸುವುದರ ಬದಲಿಗೆ ಗಿಡಗಳ ಅರ್ಧ ಭಾಗವನ್ನೇ ನಗರದೆಲ್ಲೆಡೆ ಕಡಿಯಲಾಗುತ್ತಿದೆ. ಜೆಸಿಬಿ ಬಳಸಿ ಗಿಡಗಳನ್ನು ನೆಲಕ್ಕುರುಳಿಸುತ್ತಿರುವುದು ಯಾವ ನ್ಯಾಯ. ಗಿಡಗಳನ್ನು ಕತ್ತರಿಸುವಾಗ ಸಂಬಂಧಿಸಿದ ಜೆಸ್ಕಾಂ ಮತ್ತು ಅರಣ್ಯ ಇಲಾಖೆಯವರು ಇದ್ದರೆ ಇಂತಹ ಅನಾಹುತಗಳನ್ನು ತಪ್ಪಿಸಬಹುದು. ಜನರ ತಡೆಯಲು ಹೋದರು ಜೆಸ್ಕಾಂ ಸಿಬ್ಬಂದಿ ಕೇಳುತ್ತಿಲ್ಲ. ಸಂಬಂಧಿಸಿದ ಅಧಿಕಾರಿಗಳು ಇನ್ನಾದರೂ ಎಚ್ಚೆತ್ತುಕೊಂಡು ಪರಿಸರ ಸಂರಕ್ಷಣೆ, ಗಿಡಮರಗಳ ಉಳಿವಿಗೆ ಅಗತ್ಯ ಕ್ರಮವಹಿಸಬೇಕು.
>
> **ಡಾ. ಸಂದೀಪ್,** ಹೊಸಪೇಟೆ


**SSLC**
ಈ ಭಾರಿ ಫಲಿತಾಂಶ ನಮ್ಮದೆ
ದಿನಕ್ಕೊಂದು ವಿಷಯ ಪ್ರಶ್ನೋತ್ತರ ಸರಣಿ ಹೈಸ್ಕೋರ್ ಗಳಿಸಲು ನಿತ್ಯ ಬರೆದಿಟ್ಟುಕೊಂಡು ಓದಿ
ಪುಟ. 4ರಲ್ಲಿ
ನಿನ್ನ ಏಳಿಗೆಗೆ ನೀನೇ ಶಿಲ್ಪಿ
ನಿಮ್ಮ ಅಭಿಪ್ರಾಯಗಳನ್ನು ಇ-ಮೇಲ್ ಮಾಡಿ
ಹಂಪಿ ಟೈಮ್ಸ್ ಬಳಗ
ವಿಜಯನಗರ
E-mail: hampitimes@gmail.com


## ಮೈಕ್ರೋ ನ್ಯೂಸ್

### ಇಂದು, ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸೆ ಶಿಬಿರ

**ಹಂಪಿ ಟೈಮ್ಸ್ ಕೊಟ್ಟೂರು**

ಪ್ರಾಥಮಿಕ ಆರೋಗ್ಯ ಕೇಂದ್ರ ಕೊಟ್ಟೂರು ನಲ್ಲಿ ಮಂಗಳವಾರ (ಇಂದು) ಬೆಳಗ್ಗೆ 9 ಗಂಟೆಯಿಂದ 1 ಗಂಟೆಯವರೆಗೆ ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸೆ ಶಿಬಿರ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಸಪೇಟೆ, ನೇತ್ರಲಕ್ಷ್ಮೀ ವೈದ್ಯಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ ಕೊಟ್ಟೂರು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ,ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮ ಹಾಗೂ ತಾಲೂಕು ವೈದ್ಯಾಧಿಕಾರಿಗಳ ಸಂಯುಕ್ತಾಶ್ರಯದಲ್ಲಿ ನಡೆಯಲಿದೆ. ಶಿಬಿರಕ್ಕೆ ಬರುವವರು ಕಡ್ಡಾಯವಾಗಿ ಬಿ.ಪಿ.ಎಲ್ ಕಾರ್ಡ್, ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಗಳನ್ನು ತರುವಂತೆ ಹಾಗೂ ಮೊಬೈಲ್ ಸಂಖ್ಯೆ ಮತ್ತು ಜೊತೆಗಾರರನ್ನು ಕರೆದುಕೊಂಡು ಬರುವಂತೆ ಸೂಚಿಸಿದ್ದಾರೆ.

### ಜು.30ಕ್ಕೆ ಮಾನವ ಕಳ್ಳ ಸಾಗಾಣಿಕೆ ದಿನಾಚರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಜು.30 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್‌ನ ಹೊಸ ನಜೀರ್‌ಸಾಬ್ ಸಭಾಂಗಣದಲ್ಲಿ 'ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ' ಅಂಗವಾಗಿ ಪ್ರತಿಜ್ಞಾ ವಿಧಿ ಕೈಗೊಳ್ಳುವ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯಕುಮಾರ್ ಅವರು ತಿಳಿಸಿದ್ದಾರೆ.

### ವಿವಿಧ ಯೋಜನೆಗಳಿಗೆ ಸಾಲ ಸೌಲಭ್ಯ ಒದಗಿಸಲು ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನಲ್ಲಿ ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ವತಿಯಿಂದ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದ್ದು ಯೋಜನೆಗಳಡಿ ಸಾಲ ಸೌಲಭ್ಯವನ್ನು ನೀಡಲಿದ್ದು ಅರ್ಹ ಫಲಾನುಭವಿಗಳು ಆನ್‌ಲೈನ್ ಮೂಲಕ ಆಗಸ್ಟ್ 31 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಸಾಮಾನ್ಯ ಅರ್ಹತೆಗಳು: ಸಾಮಾನ್ಯ ವರ್ಗದಲ್ಲಿ ಆರ್ಯ ವೈಶ್ಯ ಸಮುದಾಯಕ್ಕೆ ಸೇರಿರಬೇಕು, ಜಾತಿ ಮತ್ತು ಆದಾಯ ಪ್ರಮಾಣ ಪತ್ರ "ನಮೂನೆ–ಜಿ"ಯಲ್ಲಿ ಪಡೆದಿರಬೇಕು, ಅರ್ಜಿದಾರರು ಕರ್ನಾಟಕ ರಾಜ್ಯದವ ರಾಗಿರಬೇಕು, ಅರ್ಜಿದಾರರು ತಮ್ಮ ಆಧಾರ್ ಸಂಖ್ಯೆಗೆ ತಮ್ಮ ಮೊಬೈಲ್ ಸಂಖ್ಯೆಯನ್ನು ಜೋಡಣೆ ಮಾಡಿರಬೇಕು, ಅರ್ಜಿದಾರರು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಸೀಡ್ ಮಾಡಿಸಿರಬೇಕು. ಆಯ್ಕೆ ಮಾಡುವಾಗ ಮಹಿಳೆಯರಿಗೆ 33 ರಷ್ಟು, ವಿಶೇಷಚೇತನರಿಗೆ 5 ರಷ್ಟು ಹಾಗೂ ತೃತೀಯ ಲಿಂಗಗಳಿಗೆ 5 ರಷ್ಟು ಮೀಸಲಾತಿ ಇರಿಸಿದೆ. ಒಂದು ಕುಟುಂಬ ದಲ್ಲಿ ಒಬ್ಬರು ಮಾತ್ರ ಸಾಲ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಸ್ವಯಂ–ಉದ್ಯೋಗ ನೇರಸಾಲ ಯೋಜನೆಯ ಅರ್ಹತೆಗಳು: ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ >>3

# ಕಾಡು ಹಂದಿಗಳಿಂದ ಮೆಕ್ಕೆಜೋಳ ನಾಶ

■ **ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಬೊರನಹಳ್ಳಿ ಗ್ರಾಮದ ಕೊಟ್ಟೂರು ಹನುಮಂತಪ್ಪ ತಂದೆ ಮೂಗಪ್ಪ ಅವರ ಜಮೀನಿಗೆ ಕಾಡು ಹಂದಿ ನುಗ್ಗಿ ಮೆಕ್ಕೆಜೋಳ ಬೆಳೆಯನ್ನು ಭಾಗಶಃ ನಾಶಪಡಿಸಿ ರೈತನನ್ನು ಆರ್ಥಿಕ ಸಂಕಷ್ಟಕ್ಕೀಡುಮಾಡಿದೆ.

ರೈತ ಕೊಟ್ಟೂರು ಹನುಮಂತಪ್ಪ ಮಾತನಾಡಿ ಇದ್ದ ಒಂದು ಎಕ್ಕರೆ ಜಮೀನಿಗೆ ಅವರಿವರ ಬಳಿ ಸಾಲ ಮಾಡಿ ಬೀಜ, ಗೊಬ್ಬರ ತಂದು ಬಿತ್ತನೆ ಮಾಡಿದ್ದೆ ಮೆಕ್ಕೆಜೋಳ ಫಸಲು ಉತ್ತಮ ವಾಗೀಯೇ ಬೆಳೆದು ತೆನೆ ಹಂತದಲ್ಲಿತ್ತು. ಉತ್ತಮ ಫಸಲು ಕಂಡು, ಈ ವರ್ಷ, ಕಳೆದ ವರ್ಷದ ಅಷ್ಟಿಷ್ಟು ಸಾಲವನ್ನು ತೀರಿಸಬಹುದು ಎಂಬ ಆಸೆಯನ್ನು ಹೊಂದಿದ್ದೆ. ಕಾಡು ಹಂದಿಗಳ ದಾಳಿಯಿಂದ ಮೆಕ್ಕೆಜೋಳದ ಫಸಲು ಸಂಪೂರ್ಣ ನಾಶವಾಗಿ, ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಆಗಿದೆ, ಈ ರೀತಿ ಕಾಡು ಪ್ರಾಣಿ ನಾಶ ಪಡೆಸಿರುವುದನ್ನು ನೋಡಿ ಸಂಕ್ಷ ಆಗ್ತಿದೆ ಎಂದು ಪತ್ರಿಕೆಯೊಂದಿಗೆ ತಮ್ಮ ದುಃಖ ತೋಡಿಕೊಂಡರು.



ಈ ಬಾರಿ ಕಾಡು ಹಂದಿಗಳು ಹೆಚ್ಚಾಗಿದ್ದು, ಇವುಗಳ ನಿಯಂತ್ರಣಕ್ಕೆ , ಬಿತ್ತನೆ ಪ್ರಾರಂಭದಲ್ಲಿಯೇ ಅರಣ್ಯ ಅಧಿಕಾರಿಗಳಿಗೆ ಹಲವು ಬಾರಿ ರೈತರು ತಿಳಿಸಿದ್ದಾರೆ, ಆದರೆ ಯಾವೊಬ್ಬ ಅಧಿಕಾರಿಗಳು ಇವುಗಳ ನಿಯಂತ್ರಣಕ್ಕೆ ಮುಂದಾಗಿಲ್ಲ, ಅಲ್ಲದೆ ಇಂದು ಕೂಡಾ ಕರೆ ಮಾಡಿ ನಷ್ಟ ವಾಗಿರುವ ಬಗ್ಗೆ ತಿಳಿಸಿದ್ರು ಇನ್ನೂ ಇತ್ತ ತಿರುಗಿ ನೋಡಿಲ್ಲ ಎಂದು ಅಲ್ಲಿದ ರೈತರು ಆಕ್ರೋಶ ವ್ಯಕ್ತಪಡಿಸಿದರು.

ಸಂಬಂಧ ಪಟ್ಟ ಅಧಿಕಾರಿಗಳು ಶೀಘ್ರ ಇತ್ತ ಆಗಮಿಸಿ ನಾಶವಾದ ಬೆಳೆಯನ್ನು ಪರಿಶೀಲಿಸಿ ಆರ್ಥಿಕ ನೆರವು ನೀಡಬೇಕೆಂದು. ಬಳೆ ಹಾನಿ ಯಿಂದ ನಷ್ಟಕ್ಕೀಡಾದ ರೈತ ಕೊಟ್ಟೂರು ಹನುಮಂತಪ್ಪ ಮನವಿ ಮಾಡಿಕೊಂಡರು.

> ಕೊಟ್ಟೂರು ತಾಲೂಕಿನಲ್ಲಿ ಕಾಡು ಹಂದಿಗಳು ಹೆಚ್ಚಾಗುತ್ತಿದ್ದು, ಅರಣ್ಯ ಅಧಿಕಾರಿಗಳು ಕಾಡು ಹಂದಿಗಳ ಹಾವಳಿಯನ್ನು ಶೀಘ್ರ ನಿಯಂತ್ರಿಸಿ. ರೈತರ ನಷ್ಟವನ್ನು ಉಳಿಸಿ, ನಿರ್ಲಕ್ಷ್ಯಿಸಿದರೆ, ನಷ್ಟಗಳು ಹೆಚ್ಚಾದರೆ, ರೈತರು ತಮ್ಮ ಕಚೇರಿ ಬಳಿ ಪ್ರತಿಭಟನೆಗೆ ಮುಂದಾಗಬೇಕಾಗುತ್ತೆ.
>
> – **ಕೊಟ್ರೇಶ ಬೊರನಹಳ್ಳಿ**
> ಗ್ರಾಮದ ರೈತರು

# ಅಡಿ ಕೀರ್ತಿಕೆ 51ನೇ ವಾರ್ಷಿಕೋತ್ಸವ

■ **ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ಹಂಪಿ ಸಮೀಪದ ಕಡ್ಡಿರಾಂಪುರ ಗ್ರಾಮದಲ್ಲಿ ಸೋಮವಾರ ಮುರುಗನ್ ದೇವಸ್ಥಾನದಲ್ಲಿ ಅಡಿ ಕೀರ್ತಿಕೆಯ 51ನೇ ವಾರ್ಷಿಕೋತ್ಸವ ಕಾರ್ಯಕ್ರಮ ಭಕ್ತಿಯಿಂದ ಮತ್ತು ವೈಭವದಿಂದ ನಡೆಯಿತು.

ಬೆಳಗ್ಗೆ ದೇವರಿಗೆ ಸುಂದರ ಅಲಂಕಾರ, ಜೊತೆಗೆ ಕಾವಡಿಗಳು, ಹೂವಿನ ಕಾವಡಿಗಳು, ಹಾಲಿನ ಕಾವಡಿಗಳು, ಗುಂಡು ಅಲಗು, ಮತ್ತು ಸುಬ್ರಮಣ್ಯ 'ಸ್ವಾಮಿ ಶೂಲಾಯುಧವನ್ನು ಹೊತ್ತು ಸ್ವಾಮಿಯ ದೇವಸ್ಥಾನಕ್ಕೆ ತಲುಪಿ ದೇವರಿಗೆ ಅಗಲುಗಳನ್ನು ಪ್ರತಿಷ್ಠಾಪಿಸಿದರು.

ಭಕ್ತರು ಬೆನ್ನಿಗೆ ಕಬ್ಬಿಣದ ಸರಳು ಚುಚ್ಚಿ ತಮ್ಮ ಹರಕೆ ತೀರಿಸಿದರು. ಬೆನ್ನಿಗೆ ಮತ್ತು ಹೊಟ್ಟೆಗೆ ಮತ್ತು ಬಾಯಿಗೆ ಕಬ್ಬಿಣದ ಸರಳುಗಳನ್ನು ಚುಚ್ಚಿಸಿಕೊಂಡು ಅಡಿಕೀರ್ತಿ ಎಂಬ ಹೆಸರಲ್ಲಿ ಹರಕೆ ತೀರಿಸುತ್ತಾರೆ. ಇನ್ನೂ ಕೆಲವರು ತಮ್ಮ ಬೆನ್ನಿಗೆ ಕಬ್ಬಿಣದ ಸರಳು ಹಾಕಿಕೊಂಡು ಕಲ್ಲು, ಗುಂಡನ್ನು ಸುಮಾರು ದೂರು ಎಳೆಯುತ್ತಾ ತಮ್ಮ ಹರಿಕ ತೀರಿಸುತ್ತಿದ್ದರು.



ಹಂಪಿಗೆ ಹೋಗುವ ಮಾರ್ಗದಲ್ಲಿ ಬರುವ ತುರ್ತು ಕಾಲುವೆಯಿಂದ ಕಡ್ಡಿರಾಂಪುರ ಗ್ರಾಮದವ ಸುಬ್ರಮಣ್ಯ ದೇವಸ್ಥಾನದವರೆಗೆ ಬೆನ್ನಿಗೆ ಕಬ್ಬಿಣದ ಕೊಂಡಿಯನ್ನು ತೂಗು ಹಾಕಿಕೊಂಡು ಆಕಾಶದಲ್ಲಿ ಹಾರುತ್ತಾ ಹರಿಕೆ ತೀರಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನ ಈಗಿನ ವ್ಯವಸ್ಥಾಪಕರಾದ ಇ ಶಂಕರ ವೇಲು.ಇ ಸೇಲ್ವರಾಜ್ ಹಾಗೂ ವೆಂಕಟೇಶ್. ಮುರುಗನ್ ಮತ್ತು ಗ್ರಾಮದ ಹಿರಿಯ ಮುಖಂಡರು ಇದ್ದರು.

# ನೀಟ್ (NEET) ರದ್ದು ಎಸ್‌ಎಫ್‌ಐ ಸ್ವಾಗತ

## ಕರ್ನಾಟಕ ವಿಧಾನಸಭೆಯಿಂದ ನಿರ್ಣಯ ಅಂಗೀಕಾರಕ್ಕೆ ವಿದ್ಯಾರ್ಥಿ ಸಂಘಟನೆ ಹರ್ಷ

■ **ಹಂಪಿ ಟೈಮ್ಸ್ ಹೊಸಪೇಟೆ**



ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆ(ನೀಟ್) ರದ್ದುಗೊಳಿಸುವ ಮತ್ತು ರಾಜ್ಯವನ್ನು ಈ ಪರೀಕ್ಷೆಯಿಂದ ವಿನಾಯತಿ ನೀಡಲು ಒತ್ತಾಯಿಸುವ ನಿರ್ಣಯವನ್ನು ಕರ್ನಾಟಕ ವಿಧಾನಸಭೆ ಅಂಗೀಕರಿಸಿರುವುದನ್ನು ಬಳ್ಳಾರಿ–ವಿಜಯನಗರ ಜಿಲ್ಲಾ ಸಮಿತಿ ಹರ್ಷೋದ್ಗಾರ ದಿಂದ ಸ್ವಾಗತಿಸುತ್ತಿದೆ.

ಈ ನಿರ್ಣಯವು ಸಾಮಾನ್ಯ ಜನರ ಇಚ್ಛೆಯನ್ನು ಪ್ರತಿನಿಧಿಸುತ್ತದೆ ಮತ್ತು ಕರ್ನಾಟಕದ ವಿದ್ಯಾರ್ಥಿಗಳು ಎದುರಿಸುತ್ತಿರುವ ವಿವಿದ ಶೈಕ್ಷಣಿಕ ಸಮಸ್ಯೆಗಳು ಮತ್ತು ಸವಾಲುಗಳನ್ನು ಗುರುತಿಸುತ್ತದೆ. ನೀಟ್ ಪರೀಕ್ಷೆಯಿಂದಾಗಿ ಗ್ರಾಮೀಣ ಬಡ ವಿದ್ಯಾರ್ಥಿಗಳ ವೈದ್ಯಕೀಯ ಶಿಕ್ಷಣಾವಕಾಶಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿತ್ತು. ಶಾಲಾ ಶಿಕ್ಷಣ ವ್ಯವಸ್ಥೆಯನ್ನು ನಿರರ್ಥಕಗೊಳಿಸಿ ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ನೀಡುವ ರಾಜ್ಯ ಸರ್ಕಾರವನ್ನು ನಿರಾಕರಣೆ ಮಾಡಲಾಗಿತ್ತು.

ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ (NTA) ನಡೆಸುವ ನೀಟ್ ನೆಟ್ ಸೇರಿದಂತೆ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳನ್ನು ನಡೆಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಮಾತ್ರವಲ್ಲದೆ ನೀಟ್ ಪರೀಕ್ಷೆಯು ಸಿಬಿಎಸ್ಸಿ ಪಠ್ಯಕ್ರಮಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತದೆ. ಇದರಿಂದ ರಾಜ್ಯ ಪಠ್ಯಕ್ರಮ ಅಧ್ಯಯನ ಮಾಡುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳ ಮಧ್ಯ ಶೈಕ್ಷಣಿಕ ಅಸಮತೋಲನವನ್ನು ಉಂಟುಮಾಡಿರುತ್ತದೆ. ನೀಟ್ ತರಬೇತಿ ಕೇಂದ್ರಗಳು ರಾಜ್ಯದಲ್ಲಿ ಪೋಷಕರನ್ನು ಸುಲಿಗೆ ಮಾಡುವ ಕೇಂದ್ರಗಳಾಗಿದ್ದು ಬಡ ಹಾಗೂ ಮಾಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೀಟು ಲಭಿಸುವುದು ಕನಸಾಗಿತ್ತು. ಬಹುಮುಖ್ಯವಾಗಿ ರಾಜ್ಯ ಸರ್ಕಾರದ ಮೆಡಿಕಲ್ ಕಾಲೇಜುಗಳಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಸೀಟು ಲಭ್ಯವಾಗದೇ ಇರುವುದರಿಂದ ಸಾವಿರಾರು ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣವನ್ನು ಪಡೆಯಲು ಸಾಧ್ಯವಾಗದೇ ಹಲವು ವರ್ಷಗಳಿಂದ ವೈದ್ಯಕೀಯ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ.

ಮೇಲಿನ ಎಲ್ಲಾ ಸಮಸ್ಯೆಗಳನ್ನು ಅರಿತು ನೀಟ್ ವಿರುದ್ಧ ಎಸ್‌ಎಫ್‌ಐ ಸೇರಿದಂತೆ ಪ್ರಜಾಸತ್ತಾತ್ಮಕ ಹಾಗೂ ಎಡ ವಿದ್ಯಾರ್ಥಿ ಸಂಘಟನೆಗಳು ನಿರಂತರವಾಗಿ ನೀಟ್ ವಿರುದ್ಧ ಅಭಿಯಾನ ಹಾಗೂ ಹೋರಾಟಗಳನ್ನು ಮಾಡುತ್ತಾ ಸರ್ಕಾರದ ಗಮನವನ್ನು ಸೆಳೆಯಲು ಸಾಧ್ಯವಾಗಿತ್ತು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಜುಲೈ 25, 2024 ರಂದು ನಡೆದ ವಿಧಾನಸಭಾ ಕಲಾಪದಲ್ಲಿ ರಾಷ್ಟ್ರೀಯ ಪ್ರವೇಶ ಅರ್ಹತಾ ಪರೀಕ್ಷೆ (ನೀಟ್) ರದ್ದುಪಡಿಸಲು ಮತ್ತು ರಾಜ್ಯಕ್ಕೆ ಪರೀಕ್ಷೆಯಿಂದ ವಿನಾಯತಿ ನೀಡುವಂತೆ ಒತ್ತಾಯಿಸಿ ತೆಗೆದುಕೊಂಡ ನಿರ್ಣಯವನ್ನು ರಾಜ್ಯದ ವಿದ್ಯಾರ್ಥಿಗಳ ಪರವಾಗಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಜಿಲ್ಲಾ ಸಮಿತಿ ಸ್ವಾಗತಿಸುತ್ತದೆ ಎಂದು ಸಂಘಟನೆಯ ಜಿಲ್ಲಾ ಉಪಾಧ್ಯಕ್ಷ ತಿಳಿಸಿದ್ದಾರೆ.

## ವಿಜ್ಞಾನ

### ಲೋಹಗಳು ಸುಟ್ಟಾಗ ಏಕೆ ಬೂದಿಯಾಗಿ ಬದಲಾಗುವುದಿಲ್ಲ?

■ ಆರ್.ಬಿ.ಗುರುಬಸವರಾಜ

ಬೆಂಕಿ ಹೊತ್ತಿಕೊಂಡು ಸುಟ್ಟ ವಾಹನದ ಬಗ್ಗೆ ನ್ಯೂಸ್‌ನಲ್ಲಿ ತೋರಿಸುತ್ತಿದ್ದರು. ಸೋಫಾದ ಮೇಲೆ ಕುಳಿತು ತಂದೆಯ ಜೊತೆಗೆ ಟಿ.ವಿ. ನೋಡುತ್ತಿದ್ದ ರೇಖಾಳ ಮನಸ್ಸಿನಲ್ಲಿ ತಟ್ಟನೆ ಪ್ರಶ್ನೆಯೊಂದು ಮೂಡಿತು. "ವಾಹನಗಳು ಸುಟ್ಟಾಗ ಬಹುತೇಕ ಎಲ್ಲಾ ಬಿಡಿಭಾಗಗಳು ಬೂದಿಯಾಗುತ್ತವೆ. ಆದರೆ ಲೋಹದಿಂದ ಮಾಡಿದ ಭಾಗಗಳೇಕೆ ಸುಟ್ಟಾಗ ಬೂದಿಯಾಗುವುದಿಲ್ಲ" ಎಂದು ತಂದೆಗೆ ಪ್ರಶ್ನಿಸಿದಳು. ಲೋಹದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ತಂದೆ ಈ ಬಗ್ಗೆ ವಿವರಣೆ ನೀಡಿದರು.

ಕಾಗದ ಮತ್ತು ಕಟ್ಟಿಗೆಯಂತಹ ಸಾವಯವ ವಸ್ತುಗಳಿಗೆ ಹೋಲಿಸಿದರೆ ಲೋಹಗಳು ಅತಿ ಹೆಚ್ಚು ಕರಗುವ ಬಿಂದು ಮತ್ತು ಕುದಿಯುವ ಬಿಂದುವನ್ನು ಹೊಂದಿರುತ್ತವೆ. ಹಾಗಾಗಿ ಅವುಗಳನ್ನು ಸುಟ್ಟಾಗ ಬೂದಿಯಾಗಿ ಬದಲಾಗುವುದಿಲ್ಲ. ಲೋಹವನ್ನು ಬಿಸಿ ಮಾಡಿದಾಗ ಅದು ಆಕ್ಸಿಡೀಕರಣಕ್ಕೆ ಒಳಗಾಗುತ್ತದೆ. ಆಗ ಲೋಹದ ಆಕ್ಸೈಡ್ ಅಥವಾ ಲೋಹದ ಹೈಡ್ರಾಕ್ಸೈಡ್ ಅನ್ನು ರೂಪಿಸುತ್ತದೆ. ಲೋಹದ ಆಕ್ಸೈಡ್ ಅಥವಾ ಹೈಡ್ರಾಕ್ಸೈಡ್ ಬೂದಿಗಿಂತ ಘನ ಸಂಯುಕ್ತವಾಗಿದೆ.



ಸಾಮಾನ್ಯವಾಗಿ ಲೋಹಗಳ ದಹನ ಕ್ರಿಯೆಗೆ ಹೆಚ್ಚಿನ ತಾಪಮಾನ ಅಥವಾ ಆಮ್ಲಜನಕದಂತಹ ಆಕ್ಸಿಡೀ ಕರಣಕ್ಕೆ ರಾಸಾಯನಿಕ ಕ್ರಿಯೆಯ ಅಗತ್ಯವಿರುತ್ತದೆ. ಈ ರಸಾಯನಿಕ ಕ್ರಿಯೆಯು ಶಕ್ತಿ ಮತ್ತು ಶಾಖವನ್ನು ಬಿಡುಗಡೆ ಮಾಡುತ್ತದೆ. ಈ ಪ್ರಕ್ರಿಯೆಯು ಲೋಹವನ್ನು ಕರಗಿಸಲು ಅಥವಾ ಆವಿಯಾಗಲು ಕಾರಣವಾಗುತ್ತದೆಯೇ ವಿನಹ ಅದು ಬೂದಿಯಾಗಿ ಬದಲಾಗುವುದಿಲ್ಲ.

ಅನೇಕವೇಳೆ ಲೋಹದ ಆಕ್ಸೈಡ್ ಲೋಹಕ್ಕಿಂತ ವಿಭಿನ್ನ ಭೌತಿಕ ಮತ್ತು ರಾಸಾಯನಿಕ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಉದಾಹರಣೆಗೆ ಕಬ್ಬಿಣವನ್ನು ಸುಟ್ಟಾಗ ಅದು ಗಾಳಿಯಲ್ಲಿನ ಆಮ್ಲಜನಕದೊಂದಿಗೆ ಪ್ರತಿಕ್ರಿಯಿಸಿ ಕಬ್ಬಿಣದ ಆಕ್ಸೈಡ್‌ನ್ನು ರೂಪಿಸುತ್ತದೆ. ಇದನ್ನು ತುಕ್ಕು ಎಂದೂ ಕರೆಯುತ್ತಾರೆ.

ಇದಕ್ಕೆ ವ್ಯತಿರಿಕ್ತವಾಗಿ ಕಟ್ಟಿಗೆ, ಕಾಗದ ಮತ್ತು ಎಲೆಗಳಂತಹ ಸಾವಯವ ವಸ್ತುಗಳು ಇಂಗಾಲ ಆಧಾರಿತ ಸಂಯುಕ್ತಗಳನ್ನು ಹೊಂದಿರುತ್ತವೆ. ಇದು ದಹನದ ಸಮಯದಲ್ಲಿ ಕಾರ್ಬನ್ ಡೈಆಕ್ಸೈಡ್, ನೀರಿನ ಆವಿ ಮತ್ತು ಇತರ ಬಾಷ್ಪಶೀಲ ಸಾವಯವ ಸಂಯುಕ್ತಗಳನ್ನು ಉತ್ಪಾದಿಸಲು ಆಮ್ಲಜನಕದೊಂದಿಗೆ ರಾಸಾಯನಿಕ ಕ್ರಿಯೆಗೆ ಒಳಗಾಗುತ್ತದೆ. ಈ ವಸ್ತುಗಳು ಲೋಹಗಳಂತೆ ಹೆಚ್ಚಿನ ಕರಗುವ ಬಿಂದುವನ್ನು ಹೊಂದಿಲ್ಲ. ಹಾಗಾಗಿ ಅವು ಸುಟ್ಟಾಗ ಸುಲಭವಾಗಿ ಬೂದಿಯಾಗಿ ಬದಲಾಗುತ್ತವೆ.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಚೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಭಾರತೀಯರ ಹೃದಯ ಗೆದ್ದ ಮನು ಭಾಕರ್

## ಮೊದಲ ಭಾರತೀಯ ಮಹಿಳಾ ಶೂಟರ್‌ಗೆ ಒಲಿದ ಒಲಿಂಪಿಕ್ಸ್ ಪದಕ ಕಂಚಿನೊಂದಿಗೆ ಖಾತೆ ತೆರೆದ ಮನುಗೆ ಹೃದಯಪೂರ್ವಕ ಅಭಿನಂದನೆಗಳು

ಪ್ಯಾರಿಸ್ ಒಲಂಪಿಕ್ಸ್-2024ರ ಶೂಟಿಂಗ್ ವಿಭಾಗದಲ್ಲಿ ಮಹಿಳಾ ಸ್ಪರ್ಧೆಯು ಫೈನಲ್ ಪ್ರವೇಶಿಸಿದ್ದಾರೆ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಅದೆಷ್ಟೋ ಭಾರತೀಯ ಕ್ರೀಡಾ ಹೃದಯಗಳು ಅವರಿಗಾಗಿ ದೇವರಲ್ಲಿ ಪ್ರಾರ್ಥಿಸಿದ ಪ್ರಾರ್ಥನೆ ಹುಸಿಯಾಗಲಿಲ್ಲ. ತಾಯಿ ಭಾರತಾಂಬೆ ಭಕ್ತರಿಗೆ ನೋವಾಗದಂತೆ ಕಂಚಿನ ಪದಕವನ್ನು ಮುಡಿಗೇರಿಸಿಕೊಂಡು ಕಿರುನಗೆ ಬೀರಿ ಸರ್ವ ಭಾರತೀಯರ ಹೃದಯದಲ್ಲಿ ಸಂತಸ ಉಂಟುಮಾಡಿದ್ದಾರೆ.

ಭಾರತೀಯ ಶೂಟರ್ ಮನು 2024ರ ಪ್ಯಾರಿಸ್ ಒಲಂಪಿಕ್ಸ್ 02ನೇ ದಿನದಲ್ಲಿ 10 ಮೀಟರ್ ಶೂಟಿಂಗ್ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನು ಪಡೆಯುವುದರ ಮೂಲಕ ಭಾರತದ ಪದಕಗಳ ಖಾತೆ ತೆರೆದಿದ್ದಾರೆ. ಮನುರವರು ಫೆಬ್ರವರಿ-18,2002 ರಲ್ಲಿ ಹರಿಯಾಣ ರಾಜ್ಯದ ಜಜ್ಜರ್ ಜಿಲ್ಲೆಯಲ್ಲಿ ಜನಿಸಿರುತ್ತಾರೆ. ಇವರ ತಾಯಿ-ಸುಮೇಧಾ, ತಂದೆ ರಾಮಕೃಷ್ಣ ಭಾಕರ್ ಇವರು ನೇವಿಯಲ್ಲಿ ಮುಖ್ಯ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮನುರವರು 14ನೇ ವಯಸ್ಸಿನವರೆಗೂ ಸಮರ ಕಲೆಯಾದ ಬಾಕ್ಸಿಂಗ್ ಮತ್ತಿತರ ಕ್ರೀಡೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಇದರೊಂದಿಗೆ ಟೆನಿಸ್ ಮತ್ತು ಸ್ಕೇಟಿಂಗ್ ನಲ್ಲಿಯೂ ಹಲವು ರಾಷ್ಟ್ರೀಯ ಪದಕಗಳನ್ನು ಪಡೆದಿರುತ್ತಾರೆ.

ಇವರು ತಮ್ಮ ತಂದೆಯ ಇಚ್ಚೆಯಂತೆ ಸ್ಪರ್ಧಾತ್ಮಕ ಶೂಟಿಂಗ್ ಕ್ರೀಡೆಯಲ್ಲಿ ತೊಡಗಿಕೊಳ್ಳಲು ನಿರ್ಧರಿಸಿ, ಮೊದಲಿಗೆ 2017 ರ ಏಷ್ಯನ್ ಜೂನಿಯರ್ ಚಾಂಪಿಯನ್ಶಿಪ್ನಲ್ಲಿ ಮೊಟ್ಟ ಮೊದಲ ಅಂತರಾಷ್ಟ್ರೀಯ ಬೆಳ್ಳಿ ಪದಕ ಗೆದ್ದುಕೊಂಡರು. 2017(ಕೇರಳ) ಇಲ್ಲಿ ನಡೆದ ರಾಷ್ಟ್ರೀಯ ರಾಷ್ಟ್ರೀಯ ಶೂಟಿಂಗ್ ಕ್ರೀಡಾಕೂಟದಲ್ಲಿ ಭಾಗವಹಿಸಿ 09 ಚಿನ್ನದ ಪದಕಗಳನ್ನು ಗೆದ್ದರಲ್ಲದೆ, ವಿಶ್ವಕಪ್ ಪದಕ ವಿಜೇತೆ ಹೀನಾ ಸಿಧು ಅವರನ್ನು ಸೋಲಿಸಿ ಫೈನಲ್‌ನಲ್ಲಿ 242.3 ಅಂಕಗಳನ್ನು ಗಳಿಸುವ ಮೂಲಕ ಸಿಧು ಅವರ 240.8 ಅಂಕಗಳ ದಾಖಲೆಯನ್ನು ಸರಿಗಟ್ಟಿದರು. ಮೆಕ್ಸಿಕೋದ ಗ್ವಾಡಲಜರಾದಲ್ಲಿ ನಡೆದ 2018 ರ ಇಂಟರ್ನ್ಯಾಷನಲ್ ಶೂಟಿಂಗ್ ಸ್ಪೋರ್ಟ್ ಫೆಡರೇಶನ್ ವಿಶ್ವಕಪ್‌ನಲ್ಲಿ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್‌ನಲ್ಲಿ ಎರಡು ಬಾರಿ ಚಾಂಪಿಯನ್ ಆಗಿದ್ದ ಮೆಕ್ಸಿಕೊದ ಅಲೆಜಾಂಡ್ರಾ ಜವಾಲಾ ಅವರನ್ನು ಸೋಲಿಸಿ ಚಿನ್ನದ ಪದಕ ಗೆದ್ದರು. ಭಾಕರ್ 237.1 ಸ್ಕೋರ್ ಮಾಡಿದ ಜವಾಲಾ ವಿರುದ್ಧ ಅಂತಿಮ ಪಂದ್ಯದಲ್ಲಿ 237.5 ಅಂಕ ಗಳಿಸಿದರು.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Hampi Times E-paper
SCAN AND READ

16 ನೇ ವಯಸ್ಸಿನಲ್ಲಿ ಚಿನ್ನದ ಪದಕವನ್ನು ಗೆಲ್ಲುವ ಮೂಲಕ, ಭಾಕರ್ ವಿಶ್ವ ಕಪ್‌ನಲ್ಲಿ ಚಿನ್ನದ ಪದಕವನ್ನು ಗೆದ್ದ ಅತ್ಯಂತ ಕಿರಿಯ ಭಾರತೀಯರಾದರು. 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಭಾಕರ್ ವಿಶ್ವಕಪ್‌ನಲ್ಲಿ ವೈಯಕ್ತಿಕ ಎರಡನೇ ಚಿನ್ನದ ಪದಕವನ್ನು ಓಂ ಪ್ರಕಾಶ್



ಮಿಥರ್ವಾಲ್ ಅವರೊಂದಿಗೆ 476.1 ಅಂಕಗಳನ್ನು ಗಳಿಸಿ, 475.2 ಗಳಿಸಿದ ಸಾಂಡ್ರಾ ರೀಟ್ಜ್ ಮತ್ತು ಕ್ರಿಶ್ಚಿಯನ್ ರೀಟ್ಜ್ ಅವರನ್ನು ಸೋಲಿಸಿದರು.

ಭಾಕರ್ 2018 ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಅರ್ಹತಾ ಸುತ್ತಿನಲ್ಲಿ 388/400 ಅಂಕಗಳನ್ನು ಗಳಿಸಿದರು ಮತ್ತು ಫೈನಲ್‌ಗೆ ಅರ್ಹತೆ ಪಡೆದರು. ಗೋಲ್ಡ್ ಕೋಸ್ಟ್ ಕಾಮನ್‌ವೆಲ್ತ್ ಕ್ರೀಡಾಕೂಟದ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಅವರು 240.9 ಪಾಯಿಂಟ್‌ಗಳ ಹೊಸ ಕಾಮನ್‌ವೆಲ್ತ್ ಗೇಮ್ಸ್ ದಾಖಲೆಯನ್ನು ಸ್ಥಾಪಿಸುವ ಮೂಲಕ ಚಿನ್ನದ ಪದಕವನ್ನು ಪಡೆದರು.



2018 ರ ಏಷ್ಯನ್ ಗೇಮ್ಸ್‌ನಲ್ಲಿ, ಅವರು 25 ಮೀ ಏರ್ ಪಿಸ್ತೂಲ್ ಈವೆಂಟ್‌ನ ಅರ್ಹತಾ ಸುತ್ತಿನಲ್ಲಿ ಆಟದ ದಾಖಲೆಯ ಸ್ಕೋರ್ 593 ಅನ್ನು ಗಳಿಸಿದರಾದರು ಅಲ್ಲಿ ಪದಕ ಗೆಲ್ಲಲು ವಿಫಲರಾದರು 6ನೇ ಸ್ಥಾನ ಪಡೆದರು ಅಂತಿಮವಾಗಿ, ಈ ಸ್ಪರ್ಧೆಯಲ್ಲಿ ಅವರ ರಾಹಿ ಸರ್ನೋಬತ್ ಜೊತೆಗೂಡಿ ಚಿನ್ನವನ್ನು ಪಡೆದರು.

ಯೂತ್ ಒಲಿಂಪಿಕ್ಸ್ 2018 ರಲ್ಲಿ 10 ಮೀಟರ್ ಏರ್ ಪಿಸ್ತೂಲ್ ಈವೆಂಟ್‌ನಲ್ಲಿ ಪಾಯಿಂಟ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದ ಪಡೆದರು. ಇವರು ಯೂತ್ ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭದಲ್ಲಿ ಭಾರತದ ಧ್ವಜಧಾರಿಯು ವಿಶ್ವಕಪ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ವಿಜೇತರಾಗಿದ್ದಾರೆ. ಕಿರಿಯ ವಯಸ್ಸಿನ ಮನು ಭಾರತದ ಮೊದಲ ಶೂಟರ್ ಮತ್ತು ಯೂತ್ ಒಲಿಂಪಿಕ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಮಹಿಳಾ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಫೆಬ್ರವರಿ 2019 ರಲ್ಲಿ ಅವರು ದೆಹಲಿಯಲ್ಲಿ ನಡೆದ 2019 ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಗೆದ್ದಿದ್ದಾರೆ. ಮೇ 2019 ರಲ್ಲಿ ಅವರು ಮ್ಯೂನಿಚ್ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ 4ನೇ ಸ್ಥಾನದ ಮೂಲಕ 10ಮೀ ಪಿಸ್ತೂಲ್ ಸ್ಪರ್ಧೆಯಲ್ಲಿ 2020 ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದರು.

2019 ರಲ್ಲಿ ನಡೆದ ಎಲ್ಲಾ ನಾಲ್ಕು ಪಿಸ್ತೂಲ್ ಮತ್ತು ರೈಫಲ್ ವಿಶ್ವಕಪ್‌ಗಳಲ್ಲಿ, ಅವರು ಸೌರಭ್ ಚೌಧರಿ ಅವರೊಂದಿಗೆ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಗೆದ್ದು 2020 ಟೋಕಿಯೊ ಒಲಿಂಪಿಕ್ಸ್‌ಗೆ ಪ್ರಬಲ ಸ್ಪರ್ಧಿಯಾಗಿ ಹೊರಹೊಮ್ಮಿದರು. 2022 ರ ಏಷ್ಯನ್ ಗೇಮ್ಸ್‌ನಲ್ಲಿ ಮಹಿಳೆಯರ 25 ಮೀ. ಪಿಸ್ತೂಲ್ ಟೀಮ್ ಈವೆಂಟ್‌ನಲ್ಲಿ ಇಶಾ ಸಿಂಗ್ ಮತ್ತು ರಿದಮ್ ಸಾಂಗ್ವಾನ್ ಅವರೊಂದಿಗೆ ಚಿನ್ನದ ಪದಕ ಗೆದ್ದಿದ್ದಾರೆ.

ಪ್ಯಾರಿಸ್ನಲ್ಲಿ ನಡೆಯುತ್ತಿರುವ ಒಲಂಪಿಕ್ಸ್ ನಲ್ಲಿ ಕಂಚಿನ ಪದಕವನ್ನು ಗೆದ್ದು, ಒಲಿಂಪಿಕ್ಸ್‌ನಲ್ಲಿ ಶೂಟಿಂಗ್ ಪದಕ ಗೆದ್ದ ಭಾರತದ ಮೊದಲ ಮಹಿಳಾ ಶೂಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಅವರು ಫೈನಲ್‌ನಲ್ಲಿ 221.7 ಅಂಕಗಳೊಂದಿಗೆ ಈ ಸಾಧನೆ ಮಾಡಿದ್ದಾರೆ ಇವರಿಗೆ ಜಸ್ಪಾಲ್ ರಾಣಾರವರು ತರಬೇತಿಯನ್ನು ನೀಡಿರುತ್ತಾರೆ. ಮಾಧ್ಯಮಗಳೊಂದಿಗೆ ಮಾತನಾಡಿರುವ ತಾಯಿ ಸುಮೇಧಾ 'ಮಗಳನ್ನು ಬೆಂಬಲಿಸಿದ್ದಕ್ಕಾಗಿ ನಾನು ಎಲ್ಲರಿಗೂ ಧನ್ಯವಾದಗಳು ಮತ್ತು ನೀವೆಲ್ಲರೂ ಅವಳನ್ನು ಆಶೀರ್ವದಿಸುತ್ತೀರಿ ಎಂದು ನಾನು ಭಾವಿಸುತ್ತೇನೆ'ಎಂದು ಹೇಳಿದ್ದಾರೆ. ಇವರ ತಂದೆ ಭಾವುಕರಾಗಿ ಸಂತೋಷದಿಂದ 'ಇಡೀ ದೇಶವು ಮನು ಬಗ್ಗೆ ಹೆಮ್ಮೆಪಡುತ್ತದೆ' ಭಾರತ ಸರ್ಕಾರ ಮತ್ತು ಶೂಟಿಂಗ್ ಒಕ್ಕೂಟದಿಂದ ಸಿಕ್ಕ ಬೆಂಬಲಕ್ಕೆ ಕೃತಜ್ಞರಾಗಿದ್ದೇವೆ ದೇಶದ ಜನರ ಆಶೀರ್ವಾದದಿಂದ ಮಾತ್ರ ಅವಳು ಇದನ್ನು ಸಾಧಿಸಲು ಸಾಧ್ಯವಾಯಿತು. ಇದೊಂದು ಬಹುದೊಡ್ಡ ಸಾಧನೆ' ಎಂದೇಳುವ ಮೂಲಕ ತಮ್ಮ ದೊಡ್ಡತನವನ್ನು ಮೆರೆದಿದ್ದಾರೆ.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಅರ್ಜುನನಿಗೆ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡು ಎಂದು ಬೋಧಿಸಿರುವುದು ನಾನು ನಂಬುತ್ತೇನೆ ಸಾಕಷ್ಟು ಬಾರಿ ಓದಿದ್ದೆ ಈ ಗ್ರಂಥದಿಂದ ಸ್ಫೂರ್ತಿ ಪಡೆದು ಗೆಲುವು ಸಾಧಿಸಿದ್ದೇನೆ ಎಂದೇಳುತ್ತಾ, ಕಠಿಣ ಪರಿಶ್ರಮ ಮತ್ತು ಶ್ರದ್ಧೆಯಿಂದ ಈ ಪದಕವನ್ನು ಪಡೆಯಲು ಸಾಧ್ಯವಾಯಿತು. ಇದಕ್ಕೆ ಬೆಂಬಲವಾಗಿ ನಿಂತ ಸರ್ವರಿಗೂ ಹಾಗೂ ಒಲಂಪಿಕ್ಸ್‌ನಲ್ಲಿ ಭಾಗವಹಿಸಿರುವ ಭಾರತೀಯ ಕ್ರೀಡಾಪಟುಗಳೆಲ್ಲರೂ ಪದಕ ಪಡೆಯಲಿ ಎಂದು ಭಾಕರ್ ಆಶಿಸಿರುತ್ತಾರೆ.

ಈ ಗೆಲುವಿಗಾಗಿ ಭಾರತದ ಪ್ರಧಾನಿ ನರೇಂದ್ರ ಮೋದಿರವರು ಹಾಗೂ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮುರವರು ಶುಭಾಶಯಗಳನ್ನು ತಿಳಿಸಿರುತ್ತಾರೆ. ಒಳಿತಾಗಲಿ ತಾಯಿ ನಿನಗೆ ಇನ್ನಷ್ಟು ಪದಕಗಳು ನಿನ್ನಿಂದ ತಾಯಿ ಭಾರತಾಂಬೆಯ ಮುಡಿಗೇರಲೆಂದು ಭಾರತೀಯರೆಲ್ಲರೂ ಮನತುಂಬಿ ಹಾರೈಸುತ್ತೇವೆ.

# ಕೇರಳದ ಪಠ್ಯಪುಸ್ತಕಗಳಲ್ಲಿ ಲಿಂಗ ಸಮಾನತೆಯ ಆಶಯಗಳು

■ ಡಾ.ಸುಮಲತ ಬಿ.ಎಂ. ಹೊಸಪೇಟೆ

ಪಠ್ಯಪುಸ್ತಕಗಳು ಭಾಷೆಯನ್ನು ಮಾತ್ರ ಕಲಿಸಿದೆ. ಮಕ್ಕಳಿಗೆ ಪೌಢಿಮೆ, ವಿಷಯಜ್ಞಾನ, ಲೋಕ ಜ್ಞಾನ, ಸಾಹಿತ್ಯಾಭಿರುಚಿ, ಪರಿಸರಜ್ಞಾನ, ಸಹಭಾಳ್ವೆ, ಸಾರ್ವಜನಿಕ ಸಂಪರ್ಕ, ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳಂತಹ ಸಾಮಾಜಿಕ ಅಂಶಗಳನ್ನು ಕಲಿಸಿಕೊಡುವ ಕೆಲಸ ಮಾಡುತ್ತವೆ. ಇದರಜೊತೆಗೆ ಮಕ್ಕಳ ಸರ್ವೋತೋಮುಖಅಭಿವೃದ್ಧಿ, ಜೀವನ ಮೌಲ್ಯಗಳನ್ನು ಬೆಳೆಸುವಂತ ಸಾಮಾಗ್ರಿಯಾಗಿವೆ. ಹೀಗಾಗಿ ಇವುಗಳಲ್ಲಿ ಅಡಕವಾಗಿರುವ ಸಾಮಾಜೀಕರಣ ಸ್ವರೂಪ ಮತ್ತು ಲಿಂಗ ಸಂಬಂಧಿ ನೆಲೆಗಳ ಕುರಿತುಚಿಂತನ-ಮಂಥನಅಗತ್ಯವಿದೆ. ಜೊತೆಗೆ ಮಕ್ಕಳಲ್ಲಿ ಲಿಂಗಾಧಾರಿತಅಸಮಾನತೆಯನ್ನುತೊಡೆದು ಹಾಕಿ, ಲಿಂಗ ಸಮಾನತೆಯ ಸಮಾಜವನ್ನುಕಟ್ಟುವ ನಮ್ಮಗುರಿಆಗಿರುವಾಗ ಪಠ್ಯಪುಸ್ತಕಗಳಲ್ಲಿ ಹೆಣ್ಣು-ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆಯನ್ನುರೂಪಿಸುವ ಅಂಶಗಳು ಹೇಗೆ ಪ್ರತಿನಿಧೀಕರಣಗೊಂಡಿವೆಎಂಬುದನ್ನುಚರ್ಚಿಸುವ ಅಗತ್ಯಇದೆ. ಪ್ರಾಥಮಿಕ ಮತ್ತು ಮಾಧ್ಯಮಿಕಕನ್ನಡ ಪಠ್ಯಪುಸ್ತಕಗಳಲ್ಲಿ ಹೆಣ್ಣು-ಗಂಡುಗಳ ನಿರ್ವಹಿಸುವ ಪಾತ್ರಗಳ ನೆಲೆಯಲ್ಲಿ ಸಾಮಾಜೀಕರಣಗೊಳಿಸುವ ಸಂಗತಿಗಳ ಕುರಿತು ನೊಡಿದರೆ, ಯಾವ ಲಿಂಗವು, ಯಾವಕಾರ್ಯವನ್ನು ನಿರ್ವಹಿಸುತ್ತದೆ, ಯಾವ ಪಾತ್ರವನ್ನು ನಿರ್ವಹಿಸುತ್ತದೆ, ಯಾವಜವಬ್ದಾರಿಯನ್ನು ಹೊರುತ್ತದೆ, ಯಾವಕರ್ತವ್ಯವನ್ನು ನಿಭಾಯಿಸುತ್ತದೆ, ಎನ್ನುವುದರ ಮೇಲೆ ಸಮಾಜದಲ್ಲಿ ಸ್ಥಾನ-ಮಾನ, ಗೌರವ, ಸನ್ಮಾನಗಳು ವ್ಯಕ್ತಿಗೆ ಲಭ್ಯವಾಗುತ್ತವೆಎನ್ನುವ ಸಂಗತಿಗಳನ್ನು ತಿಳಿಸುತ್ತವೆ. ಇದಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕಕನ್ನಡ ಬಾಷಾ ಪಠ್ಯಪುಸ್ತಕಗಳಲ್ಲಿ ಹೆಣ್ಣು-ಗಂಡು ಮಕ್ಕಳುನಿರ್ವಹಿಸುವ ಪಾತ್ರಗಳ ಕುರಿತಂತೆ ಪಠ್ಯಗಳಲ್ಲಿ ದಾಖಲೆಗೊಂಡ ಸಂಗತಿಗಳನ್ನು ನೋಡಿದರೆ ಪಠ್ಯಪುಸ್ತಕದಚಿತ್ರ ಪಟಗಳಲ್ಲಿ ದೊರೆಯುತ್ತದೆ.

ಆದರೆ ಇದು ನಮ್ಮ ಕರ್ನಾಟಕ ಮತ್ತು ಸುತ್ತ ಮುತ್ತ ರಾಜ್ಯಗಳಲ್ಲಿ ಗಮನಿಸಿದರೆ ಈ ರೀತಿಲಿಂಗ ತಾರತಮ್ಯ ಇರುವ ಚಿತ್ರಪಟಗಳು ಪಠ್ಯಪುಸ್ತಕಗಳಲ್ಲಿ ಇವಾಗಲೂ ಕಂಡುಬರುತ್ತದೆ. ಪಠ್ಯಪುಸ್ತಕ ಪರಿಷ್ಕರಣೆ ಮಾಡಿದರು ಕೂಡ ಈ ಲಿಂಗತಾರತಮ್ಯ ಚಿತ್ರಪಟಗಳು ಬದಲಾಗಿಲ್ಲ ಅದೇತರ ಮುಂದುವರೆಸಿಕೊಂಡು ಬಂದಿವೆ ಮಕ್ಕಳಿಗೆ ಅದೇರೀತಿಯಾಗಿ ಶಿಕ್ಷಕರು ಪಾಠ ಮಾಡುತ್ತಾರೆ, ಕಮಲ ಅಮ್ಮನಿಗೆ ಸಹಾಯ ಮಾಡಿದಳು, ಬಸವ ತಂದೆಗೆ ಸಹಾಯ ಮಾಡಿದನು ಎನ್ನುವ ವಾಕ್ಯಗಳು ಚಿತ್ರಗಳು ಪಠ್ಯಪುಸ್ತಕಗಳಲ್ಲಿ ಕಂಡುಬರುತ್ತವೆ. ಆದರೆಇದಕ್ಕೆ ಹೊರತಾಗಿ ನಮ್ಮ ನೆರೆರಾಜ್ಯ ಕೇರಳ ಇದನ್ನು ಛಿದ್ರಗೊಳಿಸಿದೆ. ಪಠ್ಯಪುಸ್ತಕಗಳಲ್ಲಿ ಒಬ್ಬ ಪುರುಷ ಅಡುಗೆ ಮನೆಯಲ್ಲಿ ತೆಂಗಿನಕಾಯಿ ತುರಿಯುತ್ತಾನೆ ಆತನ ಪತ್ನಿ ಅಡುಗೆ ಮಾಡುತ್ತಾಳೆ. ಅಡುಗೆ ಮನೆಯಲ್ಲಿ ಪುರುಷ, ಪುಟ್‌ಬಾಲ್ ಮೈದಾನದಲ್ಲಿ ಬಾಲಕಿ ಆಟವಾಡುತ್ತಿರುವ ಚಿತ್ರ, ಪಿತೃ ಪ್ರಭುತ್ವವನ್ನು ಛಿದ್ರಗೊಳಿಸಿರುವುದು




ಕೇರಳದ ಶಾಲಾ ಪಠ್ಯಗಳು. ಈ ದೃಶ್ಯ ಸಾಂಪ್ರದಾಯಿಕ ಪಿತೃಪ್ರಧಾನ ವ್ಯವಸ್ಥೆ/ಸಮಾಜದಲ್ಲಿಅಸಾಂಪ್ರದಾಯಿಕವಾಗಿಕಾಣಬಹುದು.ಹೆಣ್ಣು ಅಡುಗೆ ಮನೆಗೆ ಸೀಮಿತವಲ್ಲ. ಪುರುಷನೂಅಡುಗೆ ಕೆಲಸದಲ್ಲಿ ಭಾಗಿಯಾಗಬೇಕು ಎಂಬ ಸಂದೇಶವುಳ್ಳ ಈ ದೃಶ್ಯವು ಕೇರಳದ ಮಲಯಾಳಂ ಪಠ್ಯಪುಸ್ತಕದಲ್ಲಿ ಕಾಣಸಿಗುತ್ತದೆ. 3ನೇ ತರಗತಿಗೆ ಹೊಸದಾಗಿ ಪರಿಚಯಿಸಲಾದ ಪಠ್ಯವು, 'ವೀಟಿಲೆ ಪ್ರಧಾನತೊಝಿಲಿದಾಮನುಅಡುಕ್ಕಲಾ' ('ಅಡುಗೆಮನೆಯು ಮನೆಯ ಮುಖ್ಯ ಕೆಲಸದ ಸ್ಥಳ) ಎಂದು ತಿಳಿಸುತ್ತದೆ. ಪುರುಷರು ಅಡುಗೆ ಮನೆಯಲ್ಲಿ ಕೆಲಸ ಮಾಡುವುದು ಸಹಜವೆಂದು ಪಠ್ಯ ಹೇಳುತ್ತದೆ.

1, 3, 5, 7, ಮತ್ತು 9ನೇ ತರಗತಿಗಳ ಪಠ್ಯಪುಸ್ತಕಗಳಲ್ಲಿ ಕೇರಳ ಸರ್ಕಾರವು ಪರಿಚಯಿಸಿದ ಅನೇಕ ಬದಲಾವಣೆಗಳಲ್ಲಿ ಇದೂಕೂಡ ಒಂದು. ಈ ಪಠ್ಯವು ಪಿತೃಪ್ರಧಾನತೆಯ ಲಿಂಗ ನಿಯಮಗಳನ್ನು ಒಡೆದು, ಲಿಂಗ ಸಮಾನತೆಯನ್ನು ಸಾರುವ ಉದ್ದೇಶವನ್ನು ಹೊಂದಿದೆ. ಇಂತಹ ವರ್ಣ ಬೇಧ, ಲಿಂಗ ಬೇಧ ನಡುವೆ ಕೇರಳ ಸರ್ಕಾರದ ನಡೆ ಇಡೀ ಭಾರತಕ್ಕೆ ಮಾತ್ರವಲ್ಲ, ಜಗತ್ತಿಗೆ ಹೊಸ ಸಂದೇಶವನ್ನು ರವಾನಿಸುತ್ತದೆ. ಅಡುಗೆ ಮನೆಯ ಆ ಚಿತ್ತದಜೊತೆಗೆ ಪ್ರಶ್ನೆಯನ್ನೂ ನೀಡಲಾಗಿದೆ. ಅದರಲ್ಲಿಯಾರು ಯಾವ ಕಾರ್ಯ ನಿರ್ವಹಿಸುತ್ತಿದ್ದಾರೆ ವಿವರಿಸಿ ಎಂಬ ಪ್ರಶ್ನೆಯು ಮಕ್ಕಳನ್ನು ಹೊಸ ಚಿಂತನೆಗೆ ಹಚ್ಚುತ್ತದೆ.


ಭಾರತೀಯ ಶಾಲಾ ಪಠ್ಯಪುಸ್ತಕಗಳಲ್ಲಿ ಪುರುಷರು ತಮ್ಮ ಪಕ್ಕದಲ್ಲಿ ಒಂದು ಕಪ್ ಚಹಾದೊಂದಿಗೆ ದಿನಪತ್ರಿಕೆಗಳನ್ನು ಓದುವುದು, ಅಡುಗೆ ಮನೆಯಲ್ಲಿ ಮಹಿಳೆ ಕೆಲಸ ಮಾಡುವ ಚಿತ್ರಗಳನ್ನೇ ಹೊಂದಿರುತ್ತವೆ. ಅಂತಹ ದೃಶ್ಯಗಳಿಗೆ ವಿರುದ್ಧವಾಗಿ ಪರಿಷ್ಕೃತ ಪಠ್ಯವು ಮಕ್ಕಳ ಮನಸ್ಸಿನಲ್ಲಿ ಹೊಸ ಚಿಂತನೆಯನ್ನು ಬಿತ್ತುತ್ತದೆ. ಮನೆಯ ಪ್ರತಿಯೊಬ್ಬ ಸದಸ್ಯರು ಲಿಂಗಬೇಧವಿಲ್ಲದೆ. ದೈನಂದಿನ ಕೆಲಸಗಳಲ್ಲಿ ತೊಡಗಬೇಕು ಎಂಬುದನ್ನು ಕಲಿಸುತ್ತದೆ. ಇದು ಉತ್ತಮ ಹೆಜ್ಜೆ ಪಠ್ಯಪುಸ್ತಕಗಳು ಯುವ ಪೀಳಿಗೆಗೆ ಅಡಿಪಾಯವಾಗಿವೆ. ಅವರ ಆಲೋಚನೆಗಳ ಮೇಲೆ ಪ್ರಭಾವ ಬೀರುತ್ತವೆ.

5ನೇ ತರಗತಿಯ ಇಂಗ್ಲೀಷ ಪುಸ್ತಕದಲ್ಲಿ 'ದಿ ವಿಂಗ್ಸ್‌ಆಫ್‌ಡ್ರೀಮ್ಸ್ ಎಂಬ ಅಧ್ಯಾಯವು ಪೈಲಟ್ ಆಗುವ ಹಂಬಲ ಹೊಂದಿರುವ ಆರ್ಯಾ ಎಂಬ ಹುಡುಗಿಯ ಕಥೆಯನ್ನು ವಿವರಿಸುತ್ತದೆ. ಮತ್ತೊಂದು ಪಠ್ಯವು,ಮೂರು ಹುಡುಗಿಯರು ಪುಟ್ಬಾಲ್‌ಆಡುವುದನ್ನು ವಿವರಿಸುತ್ತದೆ. (ಫುಟ್ಬಾಲ್ ಸಂಪ್ರಾದಾಯಿಕವಾಗಿ ಪುರುಷರು ಆಡುವ ಆಟ).ಅದೇರೀತಿ, 5ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವು ವಿಕಲಾಂಗ ಬಾಲಕಿ 'ನೀನು', ಗಾಲಿಕುರ್ಚಿಯಲ್ಲಿತಿರುಗಾಡುವಕಥೆಯನ್ನು ಹೇಳುತ್ತದೆ. ಗಮನಾರ್ಹ ಸಂಗತಿಯೆಂದರೆ, 'ನೀನು' ತನ್ನ ಅಂಗವೈಕಲ್ಯದಕಾರಣಕ್ಕೆತಾರತಮ್ಯಕ್ಕೆ ಒಳಗಾಗುವುದಿಲ್ಲ. ಆಕೆ ಸ್ವಾಭಿಮಾನಿಯಾಗಿ ಸಬಲಳಾಗಿ ಬೆಳೆಯುತ್ತಾಳೆ.ಆಕೆತನ್ನಇತರ ಮೂವರು ಸ್ನೇಹಿತರಂತೆ, ತನ್ನ ಸ್ನೇಹಿತನ ಹಳ್ಳಿಗೆ ಪ್ರಯಾಣಿಸುತ್ತಾರೆ. ಹೀಗೆ ಪಠ್ಯಪುಸ್ತಕಗಳಲ್ಲಿ ಲಿಂಗಸಮಾನತೆತರುವ ಪಾಠಗಳನ್ನು ಮತ್ತು ಸಂದೇಶಗಳನ್ನು ಶೈಕ್ಷಣಿಕ ಸಾಮಾಗ್ರಿಗಳಲ್ಲಿ ಅಳವಡಿಸುತ್ತಿರುವ ಕ್ರಮವು ಸ್ವಾಗತಾರ್ಹವೂ, ಇಡಿದೇಶಕ್ಕೆ ಮಾದರಿಯೂ ಆಗಿದೆ.

ಮಕ್ಕಳ ಸಾಮಾಜೀಕರಣ ರೂಪಿಸುವಲ್ಲಿ ಪಠ್ಯ ಪುಸ್ತಕಗಳಲ್ಲಿ ಪ್ರಕಟಗೊಂಡ ಚಿತ್ರಗಳ ಬಿಂಬಿಸುವ ಅರ್ಥಗಳು ಮಹತ್ವ ಪಡೆಯುತ್ತವೆ. ಚಿತ್ರಪಟಗಳಲ್ಲಿ ಆಕರ್ಷಿಸುವ ಬಣ್ಣ, ವಿನ್ಯಾಸ, ರೂಪ, ಗಾತ್ರ, ಚಿತ್ರಗಳಲ್ಲಿ ಮೂಡಿರುವ ಚಟುವಟಿಕೆ ಸಂಗತಿಗಳ ಮೂಲಕ ಅಕ್ಷರ ಜ್ಞಾನವನ್ನು ಹೇಳಿಕೊಡಲಾಗುತ್ತದೆ. ಮತ್ತು ಚಿತ್ರಪಟಗಳ ಮೂಲಕ ಮಕ್ಕಳ ಕಲಿಕೆ ಪ್ರಾರಂಭಿಸಲಾಗುತ್ತದೆ. ಈಗಾಗಿ ಮಕ್ಕಳ ಸಾಮಾಜೀಕರಣ ರೂಪಿಸುವಲ್ಲಿ ಪಠ್ಯಪುಸ್ತಕಗಳಲ್ಲಿ ದೊರೆಯುವ ಚಿತ್ರಗಳು ಮಕ್ಕಳ ಸಾಮಾಜೀಕರಣವನ್ನು ರೂಪಿಸುತ್ತದೆ. ಹಾಗಾಗಿ ನಮ್ಮ ನಮ್ಮ ರಾಜ್ಯಗಳಲ್ಲಿ ಪಠ್ಯಪುಸ್ತಕಗಳು ಬದಲಾವಣೆ ಅತ್ಯಗತ್ಯವಾಗಿದೆ. ಇದಕ್ಕೆ ಕೇಳರ ರಾಜ್ಯವು ಮಾದರಿಯಾಗಿದೆ. ಲಿಂಗ ಸಮಾನತೆ ಪಠ್ಯಪುಸ್ತಕಗಳು ನಮ್ಮ ಭಾರತಕ್ಕೆ ಅವಶ್ಯಕ. ಅದು ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಿಕ್ಷಣದ ಮಕ್ಕಳಿಗೆ ಅತಿಅತ್ಯಗತ್ಯವಾಗಿದೆ. 'ಇದು ಒಂದು ಉತ್ತಮ ಹೆಜ್ಜೆ ಪಠ್ಯಪುಸ್ತಕಗಳು ಯುವ ಪೀಳಿಗೆಗೆ ಅಡಿಪಾಯವಾಗಿದೆ'. ಕರ್ನಾಟಕದ ವಿಜ್ಞಾನದಹೊಸ ಪಠ್ಯಪುಸ್ತಕದಲ್ಲಿ ಲಿಂಗ ಸಮಾನತೆ ಇರುವ ಚಿತ್ರವನ್ನು ತರುವ ಯೋಜನೆ ನಡೆದಿದೆ ಅದು ಆದಷ್ಟು ಬೇಗ ಜಾರಿಯಾಗಲಿ.

## ಕವಿ ಮನಸು

### ವಗ್ಗರಣೆ



ಅರಿಶಿಣ ಹಚ್ಚಿದ ಅವಲಕ್ಕಿ
ತಂದಿಟ್ಟಳು ನನ್ನಾಕಿ
ಘಮ ಘಮದ ಮಸಾಲೆ
ನಾ ಹೇಗೆ ಒಲ್ಲೆನ್ನಲಿ

ಜುಮು ಜುಮು ಹಳದಿ ಸೀರೆ
ಕರಿಬೇವು ಕೊತಂಬರಿ
ಬಡವರ ಬಾದಾಮಿ ಸವಿಯದೆ
ನಾ ಹೇಗೆ ಒಲ್ಲೆನ್ನಲಿ

ಅವಲಕ್ಕಿ ವಗ್ಗರಣೆ ಜೊತೆಗೆ
ಮಿರ್ಚಿ ಇದ್ದರೆ ಚೆನ್ನಿತ್ತು
ಎಂದಂದೆ ಅವಳ ಮುಖ ನೋಡಿ
ನೋಟದಿ ಕಂಡೆ ಖಾರಪುಡಿ

ಇಲ್ಲ ಇಲ್ಲ ಕಣೇ ಈ ವಗ್ಗರಣೆ
ತುಂಬಾ ಚೆನ್ನಾಗಿದೆ ಕಣೇ
ಮತ್ತೆ ಮತ್ತೇ ಮಾಡು ಇದೇ ವಗ್ಗರಣೆ
ತಿನ್ನುವುದಷ್ಟೇ ಎನ್ನ ಹೊಣೆ

ಹಳದಿ ಸೀರೆ ಉಟ್ಟಳು ನಾರಿ
ಹುಡುಗ ಜೊತೆ ಪರಾರಿ
ಬಣ್ಣಕೆ ಏನೋ ಆಕರ್ಷಣೆ
ಒಳಗಿದೆ ಏನೋ ವಗ್ಗರಣೆ

– ಕೆ ಎಂ ಬಸವರಾಜ ಹೊಸಪೇಟೆ

### ಆಶ್ರಯದಾತ



ಮಳೆರಾಯನ ಹಾವಳಿ ನೋಡಿ
ಹರಿಸುತ ಕೆರೆಗಳ ಕೋಡಿ
ಸೂರ್ಯಗೆ ಮಾಡುತ ಮೋಡಿ
ವರುಣನ ರಾಗವ ಹಾಡಿ

ಪ್ರವಾಹಕೆ ಉಕ್ಕೇರಿದೆ ಕಡಲು
ಮರೆಯಾಗಿದೆ ಸೂರ್ಯನ ಬಿಸಿಲು
ಒದ್ದೆಯ ಬಟ್ಟೆಯ ಒಣಗಿಸಲು
ಬೇಕಿದೆ ಬೆಚ್ಚನೆ ಮಡಿಲು

ಅಜ್ಜನ ಕೊಡೆಯ ಅಡಿಗೆ
ಹರುಗಿದೆ ಹಸಿಯ ಉಡುಗೆ
ನೆರಳಾಯಿತು ಜಡಿ ಮಳೆಗೆ
ಹಲವಿದೆ ಕೊಡೆಯ ಕೊಡುಗೆ

– ಚೇತನ ಭಾರ್ಗವ ಬೆಂಗಳೂರು

## ಮೈಕ್ರೋ ನ್ಯೂಸ್

### ಜು.30 ರಂದು ಮಾನವ ಕಳ್ಳ ಸಾಗಾಣಿಕೆ ದಿನಾಚರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಜು.30 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್‌ನ ಹೊಸ ನಜೀರ್‌ಸಾಬ್ ಸಭಾಂಗಣದಲ್ಲಿ 'ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ' ಅಂಗವಾಗಿ ಪ್ರತಿಜ್ಞಾ ವಿಧಿ ಕೈಗೊಳ್ಳುವ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯಕುಮಾರ್ ಅವರು ತಿಳಿಸಿದ್ದಾರೆ.

# ನೀರು ತುಂಬುವ ಪರಿಕರಗಳಲ್ಲಿ ಶುಚಿತ್ವ ಕಾಪಾಡಿ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ । ಸೊಳ್ಳೆ ಲಾರ್ವಾ ಉತ್ಪತ್ತಿ ತಡೆಗೆ ಸಾರ್ವಜನಿಕರು ಸಹಕರಿಸಬೇಕು

**ಹಂಪಿ ಟೈಮ್ಸ್ ಬಳ್ಳಾರಿ**

ಡೆಂಗ್ಯೂ ರೋಗ ನಿಯಂತ್ರಣಕ್ಕೆ ಬಳಕೆಗಾಗಿ ನೀರು ತುಂಬುವ ಪರಿಕರಗಳಲ್ಲಿ ಶುಚಿತ್ವ ಕಾಪಾಡಬೇಕು. ಡೆಂಗ್ಯು ಹರಡುವ ಸೊಳ್ಳೆ ನೀರಿನ ಮೇಲೆ ಮೊಟ್ಟೆ ಇಡದಂತೆ ಮತ್ತು ಸೊಳ್ಳೆ ಲಾರ್ವಾ ಉತ್ಪತ್ತಿ ತಡೆಗೆ ಸಾರ್ವಜನಿಕರು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ರಾಜ್ಯ ಸರ್ಕಾರದ ನಿರ್ದೇಶನದಂತೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಜಿಲ್ಲೆಯ ಎಲ್ಲಾ ಪ್ರದೇಶಗಳಲ್ಲಿ ಪ್ರತಿ ಶುಕ್ರವಾರ ಈಡಿಸ್ ಸೊಳ್ಳೆಯ ಲಾರ್ವಾ ನಿರ್ಮೂಲನಾ ದಿನದ ಅಂಗವಾಗಿ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾದ ಸಮೀಕ್ಷೆ ಹಿನ್ನಲೆ ಅನಂತಪುರ ರಸ್ತೆಯ ಸಮೀಕ್ಷಾ ಸಮಯದಲ್ಲಿ ಭಾಗಿಯಾಗಿ ಪರಿಶೀಲನೆ ಕೈಗೊಂಡು ಅವರು ಮಾತನಾಡಿದರು.

ಡೆಂಗ್ಯು ವೈರಾಣು ಹೊಂದಿದ ಸೋಂಕಿತ ಈಡೀಸ್ ಇಜಿಪ್ಟೈ ಎಂಬ ಸೊಳ್ಳೆಯು ಕಚ್ಚಿದಾಗ ಡೆಂಗ್ಯೂ ರೋಗ ವ್ಯಕ್ತಿಯಲ್ಲಿ ಕಂಡುಬರುವ ಹಿನ್ನಲೆಯಲ್ಲಿ ಸಾರ್ವಜನಿಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಕೀಯ ತಂಡದ ಸಿಬ್ಬಂದಿಯವರು ಮನೆ ಭೇಟಿ ಮಾಡಿದಾಗ ಬಳಕೆಗಾಗಿ ನೀರು ತುಂಬುವ ಡ್ರಮ್ ಬ್ಯಾರೆಲ್, ಸಿಮೆಂಟ್ ತೊಟ್ಟಿ, ಮುಂತಾದವುಗಳನ್ನು ವಾರಕ್ಕೊಮ್ಮೆ ನೀರು ಖಾಲಿ ಮಾಡಿ, ಸ್ವಚ್ಛಗೊಳಿಸಬೇಕು. ನೀರು ತುಂಬಿದ ನಂತರ ಮುಚ್ಚಳ ಮುಚ್ಚುವ ಇಲ್ಲವೇ, ಬಟ್ಟೆಯನ್ನು ಕಟ್ಟಬೇಕು ಎಂದು ತಿಳಿಸಿದರು.



ಈಗಾಗಲೇ ಜಿಲ್ಲಾ ಡಳಿತ ನೀಡಿರುವ ಅಗತ್ಯ ಸಲಹೆ ಸೂಚನೆಗಳ ಅನ್ವಯ ವೈದ್ಯಕಿಯ ತಂಡಗಳು ನರ್ಸಿಂಗ್ ವಿದ್ಯಾರ್ಥಿಗಳ ಮೂಲಕ ತಂಡ ರಚಿಸಿ ಪ್ರತಿ ತಂಡಕ್ಕೆ 100 ಮನೆಯಂತೆ ಸಮೀಕ್ಷೆ ಕೈಗೊಂಡು ಸಾರ್ವಜನಿಕರಿಗೆ ಜಾಗೃತಿ ನೀಡುವ ಕಾರ್ಯ ನಡೆಯುತ್ತಿದೆ ಎಂದರು.

ಕೇವಲ ಮನೆಗಳಲ್ಲಿ ಮಾತ್ರವಲ್ಲದೇ ಶಾಲೆ, ಅಂಗನವಾಡಿಗಳು, ವಾಣಿಜ್ಯ ಮಳಿಗೆಗಳಲ್ಲಿ ನೀರು ಸಂಗ್ರಹಾರಕಗಳನ್ನು ಪರಿಶೀಲಿಸಿ, ಲಾರ್ವಾ ಕಂಡುಬಂದಲ್ಲಿ ಟೆಮೋಫಾಸ್ ದ್ರಾವಣವನ್ನು ಬಳಕೆಗಾಗಿ ನೀರು ತುಂಬುವ ಪರಿಕರಗಳಿಗೆ ಸಾರ್ವಜನಿಕರಿಗೆ ಮಾಹಿತಿ ನೀಡಿ ಹಾಕಲು ಸೂಚಿಸಿಲಾಗಿದೆ ಎಂದರು.

ಹಗಲು ಹೊತ್ತಿನಲ್ಲಿ ಕಚ್ಚುವ ಸೊಳ್ಳೆ ಇದಾಗಿರುವುದರಿಂದ ಹಗಲು ಹೊತ್ತಿನಲ್ಲಿ ವಿಶ್ರಾಂತಿ ಪಡೆಯುವ ಮಕ್ಕಳು, ವಯೋವೃದ್ದರು, ಗರ್ಭಿಣಿಯರು ಸೇರಿದಂತೆ ಇತರರು ಮೈತುಂಬ ಬಟ್ಟೆ ಧರಿಸಬೇಕು. ಅಗತ್ಯವೆನಿಸಿದರೆ ಸೊಳ್ಳೆ ಪರದೆ ಬಳಸಲು ಸೂಚಿಸಬೇಕು. ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧ ದಾಸ್ತಾನು ಲಭ್ಯವಿದ್ದು, ಕುಟುಂಬದ ಸದಸ್ಯರಲ್ಲಿ ಯಾರಿಗಾದರೂ ಜ್ವರ ಕಂಡು ಬಂದಲ್ಲಿ ತಕ್ಷಣವೇ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಬೇಕು ಎಂದು ತಿಳಿಸಿದರು.

ಈ ವೇಳೆ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ, ಜಿಲ್ಲಾ ಕೀಟಶಾಸ್ತ್ರಜ್ಞೆ ಡಾ.ನಂದಾ ಕಡಿ, ಡಾ.ಶರತ್ ಸೇರಿದಂತೆ ನರ್ಸಿಂಗ್ ವಿದ್ಯಾರ್ಥಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಜರಿದ್ದರು.

# ಅರೆಕಾಲಿಕ ಕಾನೂನು ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಲು ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಬಳ್ಳಾರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಅರೆ ಕಾಲಿಕ ಕಾನೂನು ಸ್ವಯಂ ಸೇವಕರಾಗಿ (ಪಿಎಲ್‌ವಿ) ಕಾರ್ಯ ನಿರ್ವ ಹಿಸಲು ಆಸಕ್ತಿ ಹೊಂದಿರುವ, ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವ ಹಿಸುತ್ತಿರುವ ಅಭ್ಯರ್ಥಿ ಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು, ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿ ಗಳು, ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿ ಸುತ್ತಿರುವ ಶಿಕ್ಷಕರು, ಪ್ರಾಧ್ಯಾಪಕರು, ಕಾನೂನು ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವವಿದ್ಯಾರ್ಥಿಗಳು,ಆಶಾಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆ ಯರು, ವಿವಿಧ ಸರ್ಕಾರಿ ಕಚೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ, ನಿವೃತ್ತ ಸರ್ಕಾರಿ ನೌಕರರು, ವಿವಿಧ ಸಂಘಟನೆಗಳಲ್ಲಿ ಕಾರ್ಯನಿರ್ವ ಹಿಸುತ್ತಿರುವ ಸಾಮಾಜಿಕ ಸೇವಾ ಮನೋ ಭಾವ ಹೊಂದಿ ರುವ ಪುರುಷ ಹಾಗೂ ಮಹಿಳೆಯರು, ಮಂಗಳಮುಖಿ ಯರು, ಸನ್ನಡತೆ ಹೊಂದಿದ ಕಾರಾಗೃಹ ಬಂದಿಗಳು ಮತ್ತು ಸ್ವ ಸಹಾಯ ಸಂಘಗಳ ಸದಸ್ಯರನ್ನು ಅರೇ ಕಾಲಿಕ ಕಾನೂನು ಸ್ವಯಂ ಸೇವಕರಾಗಿ (Para Legal Volunteers) ಕಾರ್ಯನಿರ್ವಹಿಸಲು ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ.

ಸೇವಾ ಮನೋಭಾವನೆ ಹೊಂದಿದ ಆಸಕ್ತ ಅಭ್ಯರ್ಥಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಚೇರಿಯಿಂದ ನಿಗದಿತ ಅರ್ಜಿ ನಮೂನೆ ಪಡೆದು ಕೊಂಡು, ಭರ್ತಿಮಾಡಿ ಆಗಸ್ಟ್ 09 ಸಂಜೆ 5.30 ರೊಳಗಾಗಿ ಖುದ್ದಾಗಿ ಇದೇ ಕಚೇರಿಗೆ ಸಲ್ಲಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದ ಸ್ಯ ಕಾರ್ಯದರ್ಶಿಗಳು, ಹಿರಿಯ ಸಿವಿಲ್ ನ್ಯಾಯಾ ಧೀಶ ರಾಜೇಶ್ ಎನ್.ಹೊಸಮನೆ ತಿಳಿಸಿದ್ದಾರೆ.

# ಆಗಸ್ಟ್ 3 ರವರೆಗೆ ಕೆ.ಓ.ಎಸ್ ಪರೀಕ್ಷೆ: ನಿಷೇಧಾಜ್ಞೆ ಜಾರಿ

**ಹಂಪಿ ಟೈಮ್ಸ್ ಕೊಪ್ಪಳ**

ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಪೂರಕ ಪರೀಕ್ಷೆಗಳು ಆಗಸ್ಟ್ 03 ರವರೆಗೆ ಜಿಲ್ಲಾ ಕೇಂದ್ರದಲ್ಲಿ ನಡೆಯಲಿದ್ದು, ಸುಗಮ ಮತ್ತು ಶಾಂತಿಯುತವಾಗಿ ಪರೀಕ್ಷೆ ನಡೆಯುವ ಉದ್ದೇಶದಿಂದ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163 ರನ್ವಯ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಕೆ.ಓ.ಎಸ್ ಪೂರಕ ಪರೀಕ್ಷೆಗಳು ಜುಲೈ 29 ರಿಂದ ಆಗಸ್ಟ್ 03 ರವರೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 01.30 ಗಂಟೆಯವರೆಗೆ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ವಿಭಾಗ) ಆವರಣ, ಕೊಪ್ಪಳ, ಈ ಪರೀಕ್ಷಾ ಕೇಂದ್ರದಲ್ಲಿ ಜರುಗಲಿದ್ದು, ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀಟರ್ ಅಂತರದ ಪ್ರದೇಶದಲ್ಲಿ ಯಾವುದೇ ರೀತಿಯ ಅಕ್ರಮ, ಅವ್ಯವಹಾರ ನಡೆಯದಂತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ನಿಷೇಧಾಜ್ಞೆ ಆದೇಶದನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ., ಮೊಬೈಲ್ ಪೇಜರ್, ಜರಾಕ್ಸ್, ಟೈಪಿಂಗ್ ಸೆಂಟರ್‌ಗಳನ್ನು ನಿಷೇಧಿಸಿದೆ. ಪರೀಕ್ಷೆಯಲ್ಲಿ ಪ್ರವೇಶ ಪತ್ರವನ್ನು ಹೊಂದಿದ ಅಭ್ಯರ್ಥಿಗಳು, ನಿಯೋಜಿತ ಶಿಕ್ಷಕರು ಹಾಗೂ ಜಾಗೃತ ದಳದವರನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರವಾನಿಗೆ ಇಲ್ಲದೆ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಿದೆ. ಕಾಪಿ ಮಾಡುವ ಸಾಮಗ್ರಿಗಳನ್ನು ಹಾಗೂ ಹೊರಗಿನಿಂದ ಕಾಪಿ ಬರೆದು ಪರೀಕ್ಷಾ ಕೇಂದ್ರಗಳಲ್ಲಿ ಪೂರೈಸುವುದನ್ನು ನಿರ್ಬಂಧಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವದನ್ನು ನಿಷೇಧಿಸಿದೆ. ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುದಿಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

# ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ಮೊದಲ ಪುಟದಿಂದ**

3 ಲಕ್ಷ ರೂಗಳ ಮಿತಿಯೊಳಗಿರಬೇಕು, ಅರ್ಜಿದಾರರು 18 ವರ್ಷ ಮೇಲ್ಪಟ್ಟು 55 ವರ್ಷದ ಒಳಗಿನವರಾಗಿರಬೇಕು, ಈ ಯೋಜನೆಯಲ್ಲಿ 1 ಲಕ್ಷ ರೂಗಳ ಸಾಲ ಒದಗಿಸ ಲಾಗುವುದು, ಈ ಮೊತ್ತದಲ್ಲಿ 20 ರಷ್ಟು ಸಹಾಯಧನ ಹಾಗೂ 80 ರಷ್ಟು ಸಾಲವನ್ನು ವಾರ್ಷಿಕ 4 ರಷ್ಟು ಬಡ್ಡಿದರದಲ್ಲಿ ಮಂಜೂರು ಮಾಡಲಾಗುವುದು, 2 ತಿಂಗಳ ವಿರಾಮ ಅವಧಿ ಇರುತ್ತದೆ ನಂತರ ಸಾಲವನ್ನು 34 ಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು, 2019–20 ಮತ್ತು 2020–21ನೇ ಸಾಲಿನ ಫಲಾನುಭವಿಗಳು ಪಡೆದ ಸಾಲವನ್ನು ಅವಧಿಯೊಳಗೆ ಸಂಪೂರ್ಣವಾಗಿ ಮರು ಪಾವತಿಸಿದ್ದಲ್ಲಿ, ಪುನಃ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

ಬ್ಯಾಂಕ್‌ಗಳ ಸಹಯೋಗದೊಂದಿಗೆ ಆರ್ಯ ವೈಶ್ಯ ಆಹಾರ ವಾಹಿನಿ/ ವಾಹಿನಿ ಯೋಜನೆಯ ಅರ್ಹತೆಗಳು: ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಮತ್ತು ನಗರ ಪ್ರದೇಶದವರಿಗೆ 6,00,000 ರೂಗಳ ಮಿತಿಯೊಳಗಿರಬೇಕು, ಅರ್ಜಿದಾರರು 21 ವರ್ಷ ಮೇಲ್ಪಟ್ಟು 55 ವರ್ಷದ ಒಳಗಿನವರಾಗಿರಬೇಕು, ಅಭ್ಯರ್ಥಿಯು ಯಲ್ಲೊ ಬೋರ್ಡ್ (ಎಲೆಕ್ಟ್ರಿಕ್ / ಸಿ.ಎನ್.ಜಿ) ತ್ರಿಚಕ್ರ ವಾಹನ ಅಥವಾ ನಾಲ್ಕು ಚಕ್ರದ ವಾಹನವನ್ನು ಖರೀದಿಸಲು ನಿಗಮದಿಂದ 1 ಲಕ್ಷದವರೆಗೆ ಸಬ್ಸಿಡಿ ನೀಡಲಾಗುವುದು, ಬಾಕಿ ಮೊತ್ತವನ್ನು ಯಾವುದಾದರು ಬ್ಯಾಂಕ್‌ಗಳಿಂದ ಸಾಲ ಪಡೆಯಬೇಕಾಗಿರುತ್ತದೆ, ವಾಹನವನ್ನು ಆಹಾರ ವಾಹಿನಿಯನ್ನಾಗಿ ಪರಿವರ್ತಿಸಿದ್ದಲ್ಲಿ ಮಾತ್ರ ಎರಡನೇ ಕಂತಿನ ಮೊತ್ತ 1.ಲಕ್ಷ ರೂಗಳ ಸಬ್ಸಿಡಿಯನ್ನು ನೇರವಾಗಿ ಫಲಾನುಭವಿಗೆ ಡಿ.ಬಿ.ಟಿ ಮೂಲಕ ಬಿಡುಗಡೆ ಮಾಡಲಾಗುವುದು.

ವಾಸವಿ ಜಲಶಕ್ತಿ ಯೋಜನೆಯ ಅರ್ಹತೆಗಳು: ಈ ಯೋಜನೆಯಡಿ 2 ರಿಂದ 15 ಎಕರೆ ಕೃಷಿ ಭೂಮಿ ಹೊಂದಿರುವವರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಸಾಲ–ಸಹಾಯಧನವನ್ನು ನೀಡಲಾಗುವುದು, ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಮತ್ತು ನಗರ ಪ್ರದೇಶದವರಿಗೆ 6 ಲಕ್ಷ ರೂಗಳ ಮಿತಿಯೊಳಗಿರಬೇಕು, ಅರ್ಜಿದಾರರು 21 ವರ್ಷ ಮೇಲ್ಪಟ್ಟು 55 ವರ್ಷ ಒಳಗಿನವರಾಗಿರಬೇಕು, ಈ ಯೋಜನೆಯಡಿ ಗರಿಷ್ಠ 2 ಲಕ್ಷ ರೂಗಳ ಸಾಲವನ್ನು ವಾರ್ಷಿಕ 4 ರಷ್ಟು ಬಡ್ಡಿದರದಲ್ಲಿ ಒದಗಿಸಲಾಗುವುದು ಹಾಗೂ ವಿದ್ಯುದೀಕರಣಕ್ಕಾಗಿ 50,000 ರೂಗಳ ಸಹಾಯಧನ ನೀಡಲಾಗುವುದು, 6 ತಿಂಗಳ ವಿರಾಮಾವಧಿ ಇರುತ್ತದೆ ನಂತರ ಸಾಲವನ್ನು 34 ಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು.

ಅರಿವು ಶೈಕ್ಷಣಿಕ ಸಾಲ ಯೋಜನೆಯ ಅರ್ಹತೆಗಳು: ಈ ಯೋಜನೆಯಲ್ಲಿ ಸಿ.ಇ.ಟಿ./ಎನ್.ಇ.ಇ.ಟಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೃತ್ತಿಪರ ಕೋರ್ಸ್ ಹಾಗೂ ಪಿ.ಹೆಚ್.ಡಿನಲ್ಲಿ ವ್ಯಾಸಂಗ ಮಾಡುವ ಆರ್ಯ ವೈಶ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ 1 ಲಕ್ಷ ರೂ ಗಳ ಸಾಲವನ್ನು ಶೇ. 2ರ ಬಡ್ಡಿದರದಲ್ಲಿ ಶೈಕ್ಷಣಿಕ ಸಾಲ ನೀಡಲಾಗುವುದು, ವ್ಯಾಸಂಗ ಪೂರ್ಣಗೊಂಡ ನಂತರ 04 ತಿಂಗಳ ವಿರಾಮಾವಧಿ ಇರುತ್ತದೆ, ನಂತರ ಸಾಲವನ್ನು 36 ಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು, ಅರ್ಜಿದಾರರು 18 ವರ್ಷ ಮೇಲ್ಪಟ್ಟು 35 ವರ್ಷದ ಒಳಗಿನವರಾಗಿರಬೇಕು, ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಮತ್ತು ನಗರ ಪ್ರದೇಶದವರಿಗೆ 6 ಲಕ್ಷ ರೂಗಳ ಮಿತಿಯೊಳಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ನಿಗಮದ ಸಹಾಯವಾಣಿ: 08392–267038 ಹಾಗೂ kacdc.karnataka.gov.in ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# 60 ದಿನ ವಸತಿ ಸಹಿತ ಕೌಶಲ್ಯಾಭಿವೃದ್ಧಿ ತರಬೇತಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ಮಹಿಳಾ ಹಾಗೂ ಪುರುಷ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಜುಲೈ 29 ರಿಂದ ಆಗಸ್ಟ್ 5 ರವರೆಗೆ ಅರ್ಜಿಗಳನ್ನು ಸ್ವೀಕರಿಸಲು ಅವಕಾಶವಿರಲಿದೆ.

ರಾಜ್ಯದ ಪಾರಂಪರಿಕವಾಗಿ ಚರ್ಮಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳ ಯುವ ಜನರಿಗೆ (ಪರಿಶಿಷ್ಟ ಜಾತಿಯಲ್ಲಿ ಬರುವ ಮಾದಿಗ, ಸಮಗಾರ, ಡೋರ, ಆದಿ ಜಾಂಬವ, ಮಚಗಾರ, ಮೋಚಿ ಹಾಗೂ ಇತರೆ ಚರ್ಮೋಗಾರಿಕೆಗೆ ಒಳಪಡುವ ಸಮುದಾಯಗಳಿಗೆ) ಪ್ರಸ್ತುತ ಚರ್ಮ ಉದ್ಯಮದಲ್ಲಿ ಚಾಲ್ತಿಯಲ್ಲಿರುವ ಹೊಸ ತಂತ್ರಜ್ಞಾನಗಳು, ವಿನ್ಯಾಸಗಳು ಹಾಗೂ ಮಾರುಕಟ್ಟೆಯ ಬೇಡಿಕೆಗಳನ್ನು ಪರಿಚಯಿಸಲು ಚರ್ಮ ಆಧಾರಿತ ಕೈಗಾರಿಕೆಗಳಲ್ಲಿ ಮುಂಚೂಣಿಯಲ್ಲಿರುವ ಆಗ್ರಾ, ಉತ್ತರ ಪ್ರದೇಶ ಹಾಗೂ ಕೊಲ್ಕತ್ತಾ, ಪಶ್ಚಿಮ ಬಂಗಾಳದ ರಾಜ್ಯಗಳಲ್ಲಿರುವ ಮೆ. ಸೆಂಟ್ರಲ್ ಫುಟ್‌ವೇರ್ ಟ್ರೈನಿಂಗ್ ಇನ್ ಸ್ಟಿಟ್ಯೂಟ್/ಸೆಂಟರ್ ಇಲ್ಲಿಗೆ 60 ದಿನಗಳ ವಸತಿ ಸಹಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವಾದ ಫುಟ್‌ವೇರ್ ಡಿಸೈನಿಂಗ್ ಆ್ಯಂಡ್ ಪ್ರೊಡಕ್ಷನ್ ಪಡೆಯಲು ಕಳುಹಿಸಿಕೊಡಲಾಗುವುದು.

**ವಿದ್ಯಾರ್ಹತೆ:** 10ನೇ ತರಗತಿ ತೇರ್ಗಡೆ ಹೊಂದಿರಬೇಕು, ವಯೋಮಿತಿ 18 ರಿಂದ 40 ವರ್ಷಗಳು ಇರಬೇಕು.

**ಸೌಲಭ್ಯಗಳು:** ಅರ್ಹ ಅಭ್ಯರ್ಥಿಗಳ ಪ್ರಯಾಣ ವೆಚ್ಚಗಳನ್ನು ನಿಗಮದಿಂದ ಭರಿಸಲಾಗುವುದು, ತರಬೇತಿ ಸಂಸ್ಥೆಯಲ್ಲಿ ಉಪಹಾರ ಹಾಗೂ ಭೋಜನ, ವಸತಿಗಳಿಗೆ ವ್ಯವಸ್ಥೆ ಕಲ್ಪಿಸಲಾಗುವುದು, ಅಭ್ಯರ್ಥಿಗಳಿಗೆ ತರಬೇತಿಯ ಅವಧಿಗೆ ಮಾತ್ರ ದಿನಕ್ಕೆ 200 ರೂ ರಂತೆ 60 ದಿನಗಳಿಗೆ 12,000 ರೂಗಳನ್ನು ವೇಜ್ ಲಾಸ್ ಅಲೊವೆನ್ಸ್ ಪಾವತಿಸಲಾಗುವುದು, ಮೊದಲನೇ ಹಂತದಲ್ಲಿ ಮೆ. ಸೆಂಟ್ರಲ್ ಫುಟ್‌ವೇರ್ ಟ್ರೇನಿಂಗ್ ಇನ್‌ಸ್ಟಿಟ್ಯೂಟ್. ಉತ್ತರ ಪ್ರದೇಶದ ಆಗ್ರಾ ತರಬೇತಿಯು ಆಗಸ್ಟ್ 19 ರಿಂದ ಪ್ರಾರಂಭವಾಗಿ ಅಕ್ಟೋಬರ್ 18 ರಂದು ಮುಕ್ತಾಯಗೊಳ್ಳುವ ತರಬೇತಿಗೆ 30 ಅಭ್ಯರ್ಥಿಗಳನ್ನು ನಿಯೋಜಿಸಲಾಗುವುದು.

**ದಾಖಲಾತಿಗಳು:** ವೈಯಕ್ತಿಕ ವಿವರ, 10ನೇ ತರಗತಿಯಲ್ಲಿ ತೇರ್ಗಡೆ ಹೊಂದಿರುವ ಅಂಕಪಟ್ಟಿ, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಪುಸ್ತಕದ ಮೊದಲನೆ ಪುಟದ ಪ್ರತಿ, ಪಾಸ್ ಪೋರ್ಟ ಅಳತೆಯ 5 ಪೋಟೋಗಳು ಲಭ್ಯವಿರಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08392–271741, 8660667128, 9844667691 ಗೆ ಸಂಪರ್ಕಿಸಬಹುದು.



ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಢ । ಸಂವತ್ಸರ: ಕ್ರೋಧಿ

**30–07–2024 – ಮಂಗಳವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಕೃತ್ತಿಕಾ |
| ಯೋಗ | : ವೃದ್ಧಿ |
| ಕರಣ | : ವಿಷ್ಟಿ |
| ಸೂರ್ಯೋದಯ | : 05:57:59 |
| ಸೂರ್ಯಾಸ್ತ | : 19:08:29 |
| ರಾಹು | : 15:51–17:30 |
| ಯಮಘಂಡ | : 09:16–10:54 |
| ಗುಳಿಕ | : 12:33–14:12 |

## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 29–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.88 ಅಡಿ |
| ಒಳ ಹರಿವು | 147122 ಕ್ಯುಸೆಕ್ |
| ಹೊರ ಹರಿವು | 156248 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 97.410 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1621.80 ಅಡಿ |
| ಒಳ ಹರಿವು | 88059 ಕ್ಯುಸೆಕ್ |
| ಹೊರ ಹರಿವು | 930 ಕ್ಯುಸೆಕ್ |
| ಸಾಮರ್ಥ್ಯ | 66.521 ಟಿಎಂಸಿ |

# ಮದ್ಯ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸಿ

## ಎಡಿಸಿ ಮೊಹಮ್ಮದ್ ಝುಬೇರ್ ಸೂಚನೆ । ಆಗಸ್ಟ್ 1ರಂದು ವ್ಯಸನ ಮುಕ್ತ ದಿನಾಚರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**



ಡಾ.ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆ ಅಂಗವಾಗಿ ಆಗಸ್ಟ್ 01 ರಂದು ಜಿಲ್ಲಾ ಮಟ್ಟದಲ್ಲಿ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿಯೂ ವ್ಯಸನ ಮುಕ್ತ ದಿನಾಚರಣೆ ಹಾಗೂ ಜಾಗೃತಿ ಜಾಥಾ ಕಾರ್ಯಕ್ರಮ ಆಯೋಜಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ಹೇಳಿದರು.

ಸೋಮವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ವ್ಯಸನ ಮುಕ್ತ ದಿನಾಚರಣೆ ಹಾಗೂ ವ್ಯಸನ ಮುಕ್ತ ಶಿಬಿರ ಕಾರ್ಯಕ್ರಮ ಆಯೋಜಿಸುವ ಸಂಬಂಧ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡಾ.ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ವ್ಯಸನಮುಕ್ತ ದಿನಾಚರಣೆಯನ್ನಾಗಿ ಆಚರಿಸಲು ಸರ್ಕಾರ ಆದೇಶ ಹೊರಡಿಸಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ವ್ಯಸನಮುಕ್ತ ದಿನಾಚರಣೆ ಕಾರ್ಯಕ್ರಮವನ್ನು ಆಗಸ್ಟ್ 01ರಂದು ಬೆಳಿಗ್ಗೆ 10.30 ಕ್ಕೆ ನಗರದ ಸಾಂಸ್ಕೃತಿಕ ಸಮುಚ್ಛಯ ಆವರಣದ ಹೊಂಗಿರಣದಲ್ಲಿ ಅರ್ಥಪೂರ್ಣವಾಗಿ ಆಯೋಜಿಸಲು ಅಗತ್ಯ ಪೂರ್ವಸಿದ್ಧತೆ ಕೈಗೊಳ್ಳಬೇಕು. ಶಿಷ್ಟಾಚಾರದನ್ವಯ ಆಹ್ವಾನ ಮುದ್ರಿಸಿ, ಗಣ್ಯರನ್ನು ಆಹ್ವಾನಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಂಗವಾಗಿ ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅಂದು ಬೆಳಿಗ್ಗೆ 9 ಗಂಟೆಗೆ ನಗರದ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರ್‌ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೈದಾನದಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ ಏರ್ಪಡಿಸಬೇಕು. ಜಾಗೃತಿ ಜಾಥಾವು ಕಾಲೇಜು ಮೈದಾನದಿಂದ ಆರಂಭವಾಗಿ ಸಂಗಮ್ ವೃತ್ತ, ನೂತನ ಜಿಲ್ಲಾಡಳಿತ ಭವನದ ಮುಂಭಾಗದಿಂದ ಸಾಂಸ್ಕೃತಿಕ ಸಮುಚ್ಛಯ ಆವರಣದ ಹೊಂಗಿರಣದವರೆಗೆ ನಡೆಸಬೇಕು ಎಂದರು.

ಜಾಥಾ ಕಾರ್ಯಕ್ರಮದಲ್ಲಿ ಭಿತ್ತಿಪತ್ರ, ಜಾಗೃತಿ ಘೋಷವಾಕ್ಯಗಳ ಫಲಕಗಳನ್ನು ಪ್ರದರ್ಶಿಸಿ, ಜನರಲ್ಲಿ ಮದ್ಯ, ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಸೂಚನೆ ನೀಡಿದರು. ಕಾರ್ಯಕ್ರಮದಲ್ಲಿ ಡಾ.ಮಹಾಂತ ಶಿವಯೋಗಿಗಳ ಭಾವಚಿತ್ರವನ್ನು ಅನಾವರಣಗೊಳಿಸಿ ಗೌರವ ಸಲ್ಲಿಸಬೇಕು. ಮದ್ಯ ಹಾಗೂ ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ಎಲ್ಲ ಸರ್ಕಾರಿ ಕಚೇರಿ ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಬೇಕು ಹಾಗೂ ಸಂಪನ್ಮೂಲ ವ್ಯಕ್ತಿಯಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಬೇಕು ಎಂದು ಹೇಳಿದರು.

ಪ್ರತಿ ವರ್ಷ ಆಗಸ್ಟ್ 01 ರಂದು ಡಾ.ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ವ್ಯಸನಮುಕ್ತ ದಿನಾಚರಣೆಯನ್ನಾಗಿ ಆಚರಿಸಲು ಸರ್ಕಾರ ಆದೇಶ ಹೊರಡಿಸಿದೆ. ಅದರನ್ವಯ ಜಿಲ್ಲಾ ಮಟ್ಟದಲ್ಲಿ ವ್ಯಸನಮುಕ್ತ ದಿನಾಚರಣೆಯನ್ನು ಆಗಸ್ಟ್ 01 ರಂದು ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಚರಿಸಲಾಗುತ್ತಿದೆ. ವಿವಿಧ ಇಲಾಖೆ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ಕೋರಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರದಸ ವಿ.ಸಿ.ಗುರುರಾಜ ಸೇರಿದಂತೆ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕುಷ್ಠರೋಗ ಪತ್ತೆಹಚ್ಚುವ ಅಭಿಯಾನ ಆರಂಭ



■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯಾದ್ಯಂತ ಜುಲೈ 29 ರಿಂದ ಆಗಸ್ಟ್ 14 ರವರೆಗೆ ಹಮ್ಮಿಕೊಂಡಿರುವ ಕುಷ್ಠರೋಗ ಪ್ರಕರಣ ಪತ್ತೆಹಚ್ಚುವ ಅಭಿಯಾನ ಕಾರ್ಯಕ್ರಮ ಸೋಮವಾರದಂದು ಪ್ರಾರಂಭವಾಗಿದ್ದು, ಆಶಾ ಕಾರ್ಯಕರ್ತೆಯರು ಮತ್ತು ಪುರುಷ ಸ್ವಯಂ ಸೇವಕರು ಮನೆ – ಮನೆಗೆ ಭೇಟಿ ನೀಡಿ ಚರ್ಮದ ಮೇಲಿನ ಯಾವುದೇ ತಿಳಿ ಬಿಳಿ ತಾಮ್ರ ಬಣ್ಣದ ಮಚ್ಚೆ ಹಾಗೂ ಇತ್ಯಾದಿ ಚರ್ಮದ ರೋಗ ಲಕ್ಷಣಗಳ ಕುರಿತು ತಪಾಸಣೆ ಕೈಗೊಳ್ಳುತ್ತಿದ್ದಾರೆ. ಈ ಅಭಿಯಾನದಲ್ಲಿ ಜಿಲ್ಲೆಯಾದ್ಯಂತ ಪ್ರತಿ ತಂಡದಲ್ಲಿ ಇಬ್ಬರಂತೆ ಒಟ್ಟು 2,300 ಸದಸ್ಯರನ್ನು ಒಳಗೊಂಡ 1,150 ತಂಡಗಳನ್ನು ರಚಿಸಲಾಗಿದೆ. ಈ ತಂಡಗಳ ಮೇಲ್ವಿಚಾರಣೆಗಾಗಿ 115 ಸದಸ್ಯರ ಮೇಲ್ವಿಚಾರಣಾ ತಂಡಗಳನ್ನು ರಚಿಸಲಾಗಿರುತ್ತದೆ. ಸಮೀಕ್ಷೆಯಲ್ಲಿ ಕಂಡುಹಿಡಿದ ರೋಗಿಗಳಿಗೆ ಸೂಕ್ತ ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುವುದು ಎಂದು ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ ಅಧಿಕಾರಿ ಡಾ. ಎಚ್.ಪ್ರಕಾಶ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಕ್ಷಕ ಹುದ್ದೆಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಕಂಟೋನ್‌ಮೆಂಟ್‌ನ ಶಾಂತಿಧಾಮ ಆವರಣದ ಸರ್ಕಾರಿ ಕಿವುಡು ಮತ್ತು ಮೂಕ ಮಕ್ಕಳ ಪಾಠಶಾಲೆಯಲ್ಲಿ ವಿಶೇಷ ಶಿಕ್ಷಕರ 01 ಹುದ್ದೆಗೆ ಬಾಹ್ಯಮೂಲದಿಂದ ಅಂಶಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ತಮ್ಮ ವೈಯಕ್ತಿಕ ವಿವರಗಳೊಂದಿಗೆ ವಿದ್ಯಾರ್ಹತೆ (ವಿಶೇಷ ಡಿ.ಇಡಿ, ವಿಶೇಷ ಬಿ.ಇಡಿ) ಪ್ರಮಾಣಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಜನ್ಮದಿನಾಂಕ ಪ್ರಮಾಣ ಪತ್ರ, ಆಧಾರ್‌ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ವಾಸಸ್ಥಳ ಪ್ರಮಾಣ ಪತ್ರ ಸೇರಿ ದೃಢೀಕೃತ ದಾಖಲೆಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಆ.15 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಕಿವುಡು ಮಕ್ಕಳ ಪಾಠಶಾಲೆಯ ಅಧೀಕ್ಷರ ಕಚೇರಿ ಅಥವಾ ದೂ.08392–297138, ಮೊ.9008485380, 9902106670 ಗೆ ಸಂಪರ್ಕಿಸಿ.

# ವಿದೇಶಿ ವಿದ್ಯಾಭ್ಯಾಸದ ಅಡಿಯಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ವತಿಯಿಂದ ಪ್ರಸ್ತಕ ಸಾಲಿಗೆ ವಿದೇಶಿ ವ್ಯಾಸಂಗಕ್ಕಾಗಿ ವಿದೇಶಿ ಸಾಲ ಯೋಜನೆಯಡಿ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ ಮತ್ತು ಆಂಗ್ಲೋ ಇಂಡಿಯನ್ ಜನಾಂಗದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ.ಅಲ್ಪಸಂ ಖ್ಯಾತರ ವಿದ್ಯಾರ್ಥಿಗಳಿಗೆ ವಿದೇಶಿ ವಿದ್ಯಾಭ್ಯಾಸ ಸಾಲದ ಸಾಲ ಪಡೆಯಲು http://kmdconline.karnataka.gov.in/ ವೆಬ್‌ಸೈಟ್ ಮೂಲಕ ಹೆಚ್ಚಿನ ಮಾಹಿತಿಗಾಗಿ ಮೊ.8277944207 ಗೆ ಸಂಪರ್ಕಿಸಿ

# ಡೆಂಗ್ಯೂ ನಿಯಂತ್ರಣದಲ್ಲಿ ಆರೋಗ್ಯ ತುರ್ತುಪರಿಸ್ಥಿತಿಯಂತೆ ಕಾರ್ಯನಿರ್ವಹಿಸಿ

## ಡಿಸಿ ನಲಿನ್ ಅತುಲ್ ಹೇಳಿಕೆ । ಜಿಲ್ಲಾ ಮಟ್ಟದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆ

■ **ಹಂಪಿ ಟೈಮ್ಸ್ ಕೊಪ್ಪಳ**



ಪ್ರಸ್ತುತ ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತಿದ್ದು, ಡೆಂಗ್ಯೂ ನಿಯಂತ್ರಣದಲ್ಲಿ ಕೋವಿಡ್ ಸಮಯದಂತೆ ಆರೋಗ್ಯ ತುರ್ತುಪರಿಸ್ಥಿತಿ ಎಂದು ಪರಿಗಣಿಸಿ ಅಧಿಕಾರಿಗಳು ಕಾರ್ಯನಿರ್ವಹಿಸಿ. ಡೆಂಗ್ಯೂ ಹರಡದಂತೆ ಎಚ್ಚರ ವಹಿಸಿ ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿ ಡೆಂಗ್ಯೂ ಜ್ವರ ನಿಯಂತ್ರಣ ಕುರಿತು ಜಿಲ್ಲಾ ಮಟ್ಟದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಡೆಂಗ್ಯೂ ಜ್ವರಕ್ಕೆ ನಿರ್ದಿಷ್ಟ ಔಷಧಿಗಳಿಲ್ಲ. ರೋಗಲಕ್ಷಣ ಆಧಾರಿತ ಚಿಕಿತ್ಸೆ, ಔಷಧೋಪಚಾರದ ಮೂಲಕ ರೋಗಿಯನ್ನು ಚಿಕಿತ್ಸೆಗೆ ಒಳಪಡಿಸಲಾಗುತ್ತದೆ. ಕೋವಿಡ್ ಸಮಯದಲ್ಲಿಯೂ ಇದೇ ಪರಿಸ್ಥಿತಿ ಇತ್ತು. ಆದ್ದರಿಂದ ಈಗಲೂ ಕೂಡ ಕೋವಿಡ್ ಸಮಯದಲ್ಲಿ ಕಾರ್ಯನಿರ್ವಹಿಸಿದಂತೆ ಆರೋಗ್ಯ ತುರ್ತು ಪರಿಸ್ಥಿತಿ ಎಂದು ಪರಿಗಣಿಸಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಡೆಂಗ್ಯೂ ಜ್ವರ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡು ಡೆಂಗ್ಯೂ ಹರಡದಂತೆ ಎಚ್ಚರಿಕೆ ವಹಿಸಬೇಕು ಎಂದು ಅವರು ಹೇಳಿದರು.

ಡೆಂಗ್ಯೂ ಉಂಟಾಗುವಿಕೆ ಮತ್ತು ಹರಡುವಿಕೆಗೆ ಮುಖ್ಯ ಕಾರಣವಾಗುವ ಸೊಳ್ಳೆಗಳ ಉತ್ಪತ್ತಿಯನ್ನು ನಿಯಂತ್ರಿಸುವ ಕೆಲಸ ಮೊದಲು ಆಗಬೇಕು. ಮನೆಯ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟು ಕೊಳ್ಳುವಂತೆ, ತೆರೆದ ಸಂಗ್ರಾಹಕಗಳಲ್ಲಿ ನೀರು ಸಂಗ್ರಹಣೆ ಮಾಡದಂತೆ, ಮನೆಯಲ್ಲಿ ಸೊಳ್ಳೆ ಪರದೆ, ಸೊಳ್ಳೆ ಸಿಂಪಡಕಗಳನ್ನು ಬಳಸುವಂತೆ ಸಾರ್ವಜನಿಕರಿಗೆ ಸೂಕ್ತ ರೀತಿಯಲ್ಲಿ ಮಾಹಿತಿ ನೀಡಬೇಕು. ನಗರ ಸ್ಥಳೀಯ ಸಂಸ್ಥೆಗಳಿಂದ ನಿಗದಿತ ವೇಳಾಪಟ್ಟಿ ಹಾಗೂ ನಿರ್ದಿಷ್ಟ ಸಮಯದಂತೆ ಮನೆ ಮನೆಗೆ ತೆರಳಿ ಸೊಳ್ಳೆ ನಿವಾರಕ ದ್ರಾವಣವನ್ನು ಸಿಂಪಡಿಸಬೇಕು. ವಿದ್ಯಾರ್ಥಿಗಳ ವಸತಿ ನಿಲಯಗಳಲ್ಲಿ ಕಿಟಕಿ ಗಳಿಗೆ ಮೆಶ್‌ಗಳನ್ನು ಅಳವಡಿಸಬೇಕು. ವಿದ್ಯಾರ್ಥಿಗಳಿಗೆ ಪೂರ್ಣ ಮೈ ಮುಚ್ಚುವ ಬಟ್ಟೆ ಧರಿಸುವಂತೆ ತಿಳಿಸಬೇಕು. ವಸತಿ ನಿಲಯಗಳಿಂದ ಒಡೋಮಾಸ್ ಒದಗಿ ಸಬೇಕು. ವಸತಿ ನಿಲಯ, ಶಾಲೆಗಳಲ್ಲಿ ನೀರು ಸಂಗ್ರಾಹಕಗಳಿದ್ದರೆ ಅವುಗಳಿಗೆ ಲಾರ್ವಾಹಾರಿ ಮೀನುಗಳನ್ನು ಬಿಡಬೇಕು. ಈ ಮೀನುಗಳು ಲಾರ್ವಾಗಳನ್ನೇ ಸೇವಿಸುವುದರಿಂದ ಸೊಳ್ಳೆ ಗಳ ಉತ್ಪತ್ತಿ ಮತ್ತು ಬೆಳವಣಿಗೆಯನ್ನು ನಿಯಂತ್ರಿಸುತ್ತವೆ. ಸಾಧ್ಯವಿದ್ದಲ್ಲಿ ಸಾರ್ವ ಜನಿಕರ ಮನೆಗಳಲ್ಲಿಯೂ ಲಾರ್ವಾಹಾರಿ ಮೀನುಗಳನ್ನು ಬಳಸಬಹುದು ಎಂದರು.

ಹಳ್ಳಿಗಳಲ್ಲಿ ಘನತ್ಯಾಜ್ಯ ವಸ್ತುಗಳ ಸೂಕ್ತ ವಿಲೇವಾರಿ ಮಾಡಬೇಕು. ಡೆಂಗ್ಯೂ/ಚಿಕುನ್‌ಗುನ್ಯಾದಂತಹ ರೋಗಗಳು ವರದಿಯಾದ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಸಹಯೋಗದೊಂದಿಗೆ ಕೂಡಲೇ ಒಳಾಂಗಣ ಧೂಮೀಕರಣ (Indoor fogging) ಕಾರ್ಯಕೈಗೊಳ್ಳಬೇಕು. ಅಂಗನವಾಡಿಗಳು, ಶಾಲೆಗಳು ಹಾಗೂ ವಸತಿ ನಿಲಯಗಳನ್ನು ಸೊಳ್ಳೆ ಮುಕ್ತ ಹಾಗೂ ಡೆಂಗ್ಯೂ ಮುಕ್ತ ಗೊಳಿಸಬೇಕು. ಮಕ್ಕಳು, ವಯಸ್ಕರು ಅಥವಾ ವಯೋವೃದ್ದರು ಎಂಬ ಭೇದವಿಲ್ಲದೆ ಡೆಂಗ್ಯೂ ತೀವ್ರವಾಗಿ ಹರಡುವುದರಿಂದ ರೋಗಲಕ್ಷಣಗಳ ಕುರಿತು ಜನರಿಗೆ ಅರಿವು ಮೂಡಿಸಬೇಕು ಎಂದು ಸೂಚನೆ ನೀಡಿದರು.

2024 ರ ಜುಲೈ ಮಾಹೆಯವರೆಗಿನ ಡೆಂಗ್ಯೂ ಹಾಗೂ ಚಿಕುನ್‌ಗುನ್ಯಾ ದತ್ತಾಂಶ:

2024ನೇ ಸಾಲಿನಲ್ಲಿ ಜುಲೈವರೆಗೂ ಜಿಲ್ಲೆಯಾದ್ಯಂತ 2,435 ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ಅವುಗಳಲ್ಲಿ 131 ಡೆಂಗ್ಯೂ ಜ್ವರ ಪ್ರಕರಣಗಳು ದೃಢಪಟ್ಟಿವೆ. ಚಿಕುನ್ ಗುನ್ಯಾಗೆ ಸಂಬಂಧಿಸಿದಂತೆ 411 ಮಾದರಿ ಗಳನ್ನು ಸಂಗ್ರಹಿಸಲಾಗಿದ್ದು, 10 ಪ್ರಕರಣಗಳು ದೃಢಪಟ್ಟಿವೆ. ತಾಲ್ಲೂಕುವಾರು ದತ್ತಾಂಶ ಸಂಗ್ರಹದಲ್ಲಿ ಜುಲೈ ಮಾಹೆಯವರೆಗೂ ಕೊಪ್ಪಳ ತಾಲ್ಲೂಕಿನಲ್ಲಿ 1,477 ಮಾದರಿ ಸಂಗ್ರಹ ಪರೀಕ್ಷೆಯಲ್ಲಿ 50 ಪ್ರಕರಣಗಳು, ಗಂಗಾವತಿ ತಾಲ್ಲೂಕಿನಲ್ಲಿ 208 ಮಾದರಿ ಗಳಲ್ಲಿ 33 ಪ್ರಕರಣಗಳು, ಕುಷ್ಟಗಿ ತಾಲ್ಲೂಕಿ ನಲ್ಲಿ 288 ಮಾದರಿಗಳಲ್ಲಿ 11 ಪ್ರಕರಣಗಳು, ಯಲಬುರ್ಗಾ ತಾಲ್ಲೂಕಿನಲ್ಲಿ 462 ಮಾದರಿಗಳಲ್ಲಿ 37 ಡೆಂಗ್ಯೂ ಪ್ರಕರಣಗಳು ದೃಢಪಟ್ಟಿವೆ. ಚಿಕುನ್‌ಗುನ್ಯಾಗೆ ಸಂಬಂಧಿ ಸಿದಂತೆ ಕೊಪ್ಪಳ ತಾಲ್ಲೂಕಿನಲ್ಲಿ 238 ಮಾದರಿ ಸಂಗ್ರಹ ಪರೀಕ್ಷೆಯಲ್ಲಿ 5 ಪ್ರಕರಣ ಗಳು, ಗಂಗಾವತಿ ತಾಲ್ಲೂಕಿನಲ್ಲಿ 51 ಮಾದರಿ ಗಳಲ್ಲಿ 1 ಪ್ರಕರಣ, ಕುಷ್ಟಗಿ ತಾಲ್ಲೂಕಿನಲ್ಲಿ 29 ಮಾದರಿಗಳಲ್ಲಿ 4 ಪ್ರಕರಣಗಳು ದೃಢಪಟ್ಟಿವೆ. ಯಲಬುರ್ಗಾ ತಾಲ್ಲೂಕಿನಲ್ಲಿ 93 ಮಾದರಿ ಗಳ ಸಂಗ್ರಹವನ್ನು ಪರೀಕ್ಷೆ ಮಾಡಲಾಗಿದ್ದು, ಯಾವುದೇ ಪ್ರಕರಣ ದೃಢಪಟ್ಟಿಲ್ಲ. ಜಿಲ್ಲೆಯಾದ್ಯಂತ ಒಟ್ಟು 41 ಚಿಕುನ್‌ಗುನ್ಯಾ ಮಾದರಿ ಸಂಗ್ರಹ ಪರೀಕ್ಷೆಯಲ್ಲಿ 10 ಪ್ರಕರಣ ಗಳು ದೃಢಪಟ್ಟಿವೆ ಎಂದು ಡಾ.ವೆಂಕಟೇಶ್ ಮಾಹಿತಿ ನೀಡಿದರು.

ಇದೇ ಸಂದರ್ಭ ಜಿಲ್ಲಾ ಏಡ್ಸ್ ನಿಯಂತ್ರಣ, ಜಿಲ್ಲಾ ಗುಣಮಟ್ಟ ಭರವಸೆ ಸಮಿತಿ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಲಿಂಗರಾಜು ಟಿ., ಡಿಎಸ್‌ಒ ಡಾ.ನಂದಕುಮಾರ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರವೀಂದ್ರನಾಥ ಎಂ.ಎಚ್., ಡಿಟಿಒ ಡಾ.ಶಶಿಧರ ಎ., ಡಿಎಲ್‌ಒ ಡಾ.ಪ್ರಕಾಶ ಎಚ್. ಸಿಎಂಒ ಡಾ.ಈಶ್ವರ ಸವಡಿ, ಕಿಮ್ಸ್ ಎಚ್‌ಒಡಿ ಡಾ.ನಾರಾಯಣ, ನಗರಸಭೆ ಪೌರಾಯುಕ್ತರಾದ ಗಣಪತಿ ಪಾಟೀಲ್, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿ ಕಾರಿಗಳು ಇತರರು ಉಪಸ್ಥಿತರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi | ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

SSLC KANNADA Hampi Times Margadarshi

## ವಿಷಯ : ಕನ್ನಡ(ಪ್ರ.ಭಾ) – ನಮ್ಮ ಭಾಷೆ

Date: 28-07-2024

**ಲೇಖಕರ ಪರಿಚಯ :** ಎಂ. ಮರಿಯಪ್ಪ ಭಟ್ಟರು ಕ್ರಿಸ್ತಶಕ 1906ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕಬಕ ಗ್ರಾಮದಲ್ಲಿ ಜನಿಸಿದರು. ಅವರ ಕೃತಿಗಳು ಯಾವುವೆಂದರೆ ತುಳು–ಇಂಗ್ಲಿಷ್ ನಿಘಂಟು, ಅಭಿನವ ಮಂಗರಾಜ ನಿಘಂಟು, ಜಾತಕ ತಿಲಕಂ, ಛಂದಸ್ಸಾರ, ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ವರ್ಧಮಾನ ಪುರಾಣ, ಕಿಟೆಲ್ಲರ ಕನ್ನಡ–ಇಂಗ್ಲೀಷ್ ನಿಘಂಟು ಇನ್ನು ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು ಸಮಿತಿಯ' ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸರ್ಕಾರದ ಪುರಸ್ಕಾರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಭಾಷೆ ಯಾವುದಕ್ಕೆ ಸಾಧನವಾಗಿದೆ ?**
**ಉತ್ತರ:** ನಮ್ಮ ಸುತ್ತಮುತ್ತಲಿನರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಸಾಧನವಾಗಿದೆ.

**2. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ವಿಚಾರವಾಗಿ ತರಪೇತು ಕೊಡುತ್ತವೆ ?**
**ಉತ್ತರ:** ಪ್ರಾಣಿಗಳು ತಮ್ಮ ಮಕ್ಕಳಿಗೆ ಚಲನವಲನಗಳ ವಿಷಯವಾಗಿ ಹಾಗೂ ಆಹಾರ ವಿಚಾರಗಳ ವಿಚಾರವಾಗಿ ತಮ್ಮ ಮಕ್ಕಳಿಗೆ ಸಹಜವಾಗಿ ತರಪೇತು ಕೊಡುತ್ತವೆ.

**3. ಮನುಷ್ಯನಿಗೆ ಲೆಕ್ಕವಿಡುವ ಅವಶ್ಯಕತೆ ಯಾವಾಗ ಉಂಟಾಯಿತು ?**
**ಉತ್ತರ:** ನವಶೀಲಾಯುಗದ ಮಾನವ, ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಎಂದು ಮೊದಲು ಮಾಡಿದನೋ ಅಂದು ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು.

**4.ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು ?**
**ಉತ್ತರ:** ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು 12ನೇ ಶತಮಾನದ ಕವಿ ನಯಸೇನ.

**5. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು ?**
**ಉತ್ತರ:** ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಮಹಮ್ಮದೀಯರ ಆಳ್ವಿಕೆಯಲ್ಲಿ ಬಂದವು.

**6. ಕನ್ನಡ ಭಾಷೆಯ ಬಗ್ಗೆ ಮಹಾಲಿಂಗರಂಗರು ಏನೆಂದು ಹೇಳಿದ್ದಾರೆ?**
**ಉತ್ತರ:** ಕನ್ನಡ ಭಾಷೆಯ ಬಗ್ಗೆ ಮಹಾಲಿಂಗ ರಂಗರು " ಸುಲಿದ ಬಾಳೆಯ ಹಣ್ಣಿನಂತೆ, ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ ಸುಲಭವೂ ರುಚಿಯುಳ್ಳದ್ದು ಆಗಿದೆ ಎಂದು ಹೇಳಿದ್ದಾರೆ.

**7. ಕನ್ನಡಕ್ಕೆ ಬಂದ ಪರ್ಷಿಯ ನ್ ಶಬ್ದಗಳು ಯಾವುವು ?**
**ಉತ್ತರ:** ಕನ್ನಡಕ್ಕೆ ಬಂದ ಪರ್ಷಿಯನ್ ಶಬ್ದಗಳು ಯಾವುವೆಂದರೆ ದಿವಾನ, ಸರಕಾರ, ಮುನಷಿ, ಸರದಾರ, ದವಲತ್ತು, ಮುಸಾಫರ್, ಕಚೇರಿ, ಅಮಲ್ದಾರ, ತಹಶಿಲ್ದಾರ ಇತ್ಯಾದಿ.

**8. ಪೋರ್ಚುಗೀಸ್ ಭಾಷೆಯಿಂದ ಕನ್ನಡಕ್ಕೆ ಬಂದ ಶಬ್ದಗಳು ಯಾವುವು ?**
**ಉತ್ತರ:** ಪೋರ್ಚುಗೀಸ್ ಭಾಷೆಯಿಂದ ಕನ್ನಡಕ್ಕೆ ಬಂದ ಶಬ್ದಗಳು ಯಾವುವೆಂದರೆ ಬಟಾಟೆ, ಅನಾನಸು, ಜಂಗಾಲ ಇತ್ಯಾದಿ.

**9. ಇಂಗ್ಲೀಷ್ ಭಾಷೆಯಿಂದ ಕನ್ನಡಕ್ಕೆ ಬಂದ ಶಬ್ದಗಳು ಯಾವುವು?**
**ಉತ್ತರ:** ಇಂಗ್ಲೀಷ್ ಭಾಷೆಯಿಂದ ಕನ್ನಡಕ್ಕೆ ಬಂದ ಶಬ್ದಗಳು ಯಾವುವೆಂದರೆ ರೈಲು, ಮೋಟಾರು, ಹೋಟ್ಲು, ಆಫೀಸು, ಇಸ್ಕೂಲು, ಸಿನಿಮಾ, ರೇಡಿಯೋ, ಆಸ್ಪತ್ರೆ, ಕೋರ್ಟು, ಡಿಕ್ರಿ, ಲೈಟು ಇತ್ಯಾದಿ.

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ವ್ಯಾವಹಾರಿಕ ಹಾಗೂ ಗ್ರಾಂಥಿಕ ಭಾಷೆಯ ಲಕ್ಷಣಗಳೇನು ?**
**ಉತ್ತರ:** ವ್ಯಾವಹಾರಿಕವೆಂದರೆ ಜೀವದ್ಭಾಷೆ. ಜನರು ಮಾತನಾಡುತ್ತಾರೆ. ವ್ಯವಹರಿಸುತ್ತಾರೆ. ಉದಾಹರಣೆಗೆ ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲೀಷ್, ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ. ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ ಇತ್ಯಾದಿ ಈ ವರ್ಗಕ್ಕೆ ಉದಾಹರಣೆ. ಎಲ್ಲಾ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗ ಬೇಕಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ. ಆದರೆ ಅದು ಗ್ರಾಂಥಿಕ ಭಾಷೆಯಲ್ಲ. ಹಾಗೆಯೇ ಎಲ್ಲಾ ಗ್ರಾಂಥಿಕ ಭಾಷೆಗಳು ಇಂದು ವ್ಯಾವಹಾರಿಕವಾಗಿ ಇರುವುದಿಲ್ಲ. ದೇವ ಭಾಷೆಯೆನಿಸಿಕೊಂಡ ಸಂಸ್ಕೃತ ಸರ್ವ ಸಂಪನ್ನತೆಯಿಂದ ಕೂಡಿದ ಗ್ರಾಂಥಿಕ ಭಾಷೆಯಾಗಿದೆ. ಆದರೆ ಇಂದು ಯಾವ ಪ್ರದೇಶದಲ್ಲಿಯೂ ಅದು ವ್ಯಾವಹಾರಿಕ ಭಾಷೆಯಾಗಿರುವುದಿಲ್ಲ.

**2. ಕನ್ನಡ ಭಾಷೆ ಹದಗೊಂಡದ್ದು ಹೇಗೆ ?**
**ಉತ್ತರ:** ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರರು ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶ್ರೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿ ವ್ಯಕ್ತಪಡಿಸಿದರು ಹೀಗೆ ಕನ್ನಡ ಭಾಷೆಯು ಹದಗೊಂಡಿತು.

**3. ಆಂಗ್ಲ ಭಾಷೆ ವಿಶ್ವ ವ್ಯಾಪಿಯಾಗಲು ಕಾರಣವೇನು ?**
**ಉತ್ತರ:** ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ ಆಕಾಂಕ್ಷೆ ವಿಚಾರ ಮುಂತಾದವನ್ನು ಆ ಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆ ಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಇದಕ್ಕೆಲ್ಲ ಆಂಗ್ಲ ಜನರ ಸಂಕಲ್ಪ, ಕೃಷಿ ಕಾರಣವೆಂದು ಬೇರೆ ಹೇಳುವಂತಿಲ್ಲ.

**4. ಲಿಪಿಯ ಜಾಡು ಆರಂಭಗೊಂಡ ಬಗೆ ಹೇಗೆ ?**
**ಉತ್ತರ:** ನವಶಿಲಾಯುಗದ ಮಾನವ ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಎಂದು ಮೊದಲು ಮಾಡಿದನೋ ಅಂದು ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಇದು ಲಿಪಿಯ ಉಗಮದ ಕಾಲ.ಯಾವ ಓದು ಬರಹವಿಲ್ಲದ ಹಳ್ಳಿಯ ಕೆಲಸಗಾರನಾದರೂ ಸರಿಯೆ ತಾನು ದಿನಗೆಲಸಕ್ಕೆ ಹೋದ ಲೆಕ್ಕವನ್ನು ಗೋಡೆಯ ಮೇಲೆ ದಿನಂಪ್ರತಿ ಒಂದೊಂದು ಗೆರೆ ಎಳೆದು ಗುರುತಿಸಿ, ಕೊನೆಯಲ್ಲಿ ಎಣಿಸಿ ಲೆಕ್ಕ ಹಾಕಿ ಸಂಬಳವನ್ನು ಪಡೆಯುತ್ತಾನೆ. ಪ್ರಾಕ್ತನ ವಿಮರ್ಶಕ ಸುಮೆರ್, ನೈಲ್, ಕ್ರಿಟಗಿರಿ ಇತ್ಯಾದಿ ಪ್ರದೇಶಗಳಲ್ಲಿ ಉಪಲಬ್ಧವಾದ ಅತ್ಯಂತ ಪುರಾತನ ಅವಶೇಷಗಳಲ್ಲಿ ವ್ಯಾಪಾರ, ವ್ಯವಹಾರ ಲೆಕ್ಕಗಳಿಗೆ ಸಂಬಂಧಿಸಿದ ಈ ಬಗೆಯ ಲಿಪಿ ಸಾಕ್ಷ್ಯಗಳನ್ನು ಕಂಡು ಕೊಂಡಿದ್ದಾರೆ. ಇದೇ ಲಿಪಿಯ ಮೊದಲ ಜಾಡು ಎನ್ನಬಹುದು.

(ಮುಂದುವರೆಯುವುದು)

www.hampitimes.com/epaper.hampitimes.com

ಮಾರ್ಗದರ್ಶಿ ಶಿಕ್ಷಕರು : ಮಧು.ಕೆ., ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ(ತಾ), ವಿಜಯನಗರ(ಜಿ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA